IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಕನಕ–ಮೀರಾಬಾಯಿ: ತೌಲನಿಕ ಅಧ್ಯಯನ

**ಡಾ. ರೇಖಾ ಜೋಗುಳ**

ಪ್ರಾಚಾರ್ಯರು

ಕಿಟೆಲ್ ಕಲಾ ಮಹಾವಿದ್ಯಾಲಯ, ಧಾರವಾಡ

ಭಾರತೀಯ ಸಾಹಿತ್ಯವು ಬಹುಮುಖೀನ ಹಾಗೂ ಬಹುವಿಶೇಷತೆಯಿಂದ ಕೂಡಿಕೊಂಡಿದೆ. ಸಾಹಿತ್ಯವನ್ನು ಅವಲೋಕಿಸಿದಾಗ, ಬೆಳೆದು ಬಂದ ರೀತಿಯನ್ನು ಸಿಂಹಾವಲೋಕಿಸಿದಾಗ ಹಲವು ಮಹತ್ವದ ಮೈಲುಗಲ್ಲುಗಳು ನಮಗೆ ಕಾಣಿಸುತ್ತವೆ. ನಮ್ಮ ಸಾಹಿತ್ಯದಲ್ಲಿ ಇತಿಹಾಸ, ಸಂಸ್ಕೃತಿ, ಕಲೆ, ಚರಿತ್ರೆ, ಪುರಾಣ, ಪರಂಪರೆಯ–ಸಂಪ್ರದಾಯಗಳಿರುವುದನ್ನು ಗುರುತಿಸಬಹುದು. ಕನ್ನಡ ಸಾಹಿತ್ಯವು ಇದಕ್ಕೇನು ಹೊರತಾದುದಲ್ಲ. ಸಾಹಿತ್ಯದ ವೈವಿಧ್ಯತೆ, ಸ್ವರೂಪ, ಬಗೆಗಳಲ್ಲಿ ಅತೀ ಮಹತ್ವದ ಭಾಗವಾಗಿ ಅನುಭಾವ ಸಾಹಿತ್ಯ, ಸಂತ ಸಾಹಿತ್ಯ, ಕೀರ್ತನಾ ಸಾಹಿತ್ಯ, ಭಕ್ತಿ ಸಾಹಿತ್ಯ ತುಂಬಾ ಜನಜನಿತವಾದುದಾಗಿದೆ. ಕಾಲಗತಿಸಿದರೂ ಮತ್ತೆ ಮತ್ತೆ ನಮ್ಮನ್ನು ಕಾಡುವ, ನಾವು ಹಾಡುವ ಸಾಹಿತ್ಯವಿದು. ಇದರಲ್ಲಿ ಪ್ರಮುಖವಾಗಿ ಕನಕದಾಸರ ಕೀರ್ತನೆಗಳನ್ನು ಹಾಗೂ ಮೀರಾಬಾಯಿಯ ಪದ ಅಥವಾ ಪದಾವಲೀಗಳು ಬರುತ್ತವೆ.

ಪರ್ಷಿಯನ್ ದಾರ್ಶನಿಕ ಕವಿ ವಿಶ್ವವನ್ನು ಕುರಿತು "ಮೊದಲ ಹಾಗೂ ಕಡೆಯ ಪುಟವನ್ನು (ಆದಿ–ಅಂತ್ಯ) ಕಳೆದುಕೊಂಡ ಪುಸ್ತಕ ಈ ವಿಶ್ವ. ಈ ಪುಸ್ತಕ ಹೇಗೆ ಪ್ರಾರಂಭವಾಯಿತು? ಗೊತ್ತಿಲ್ಲ; ಹೇಗೆ ಮುಕ್ತಾಯ ತಿಳಿದಿಲ್ಲ, ಮಾನವ ತನಗೆ ಬುದ್ಧಿ ಬಂದಾಗಿನಿಂದಲೂ ಕಳೆದು ಹೋದ ಈ ಪುಟಗಳನ್ನು ಹುಡುಕುತ್ತಿದ್ದಾನೆ. ಈ ಹುಡುಕುವಿಕೆ ಮತ್ತು ಅದರ ಪರಿಣಾಮ ಇವುಗಳನ್ನು ತತ್ವಜಿಜ್ಞಾಸೆ ಎಂದು ಕರೆಯುತ್ತಾರೆ" ಎಂದು ಹೇಳಿದ್ದಾನೆ.

ಈ ತತ್ವಜಿಜ್ಞಾಸೆಯ ಅರಸುವ, ಹುಡುಕುವವರ ಸಾಲಿನಲ್ಲಿ ಅಗ್ರಗಣ್ಯರು ಕನಕದಾಸರು ಹಾಗೂ ಮೀರಾಬಾಯಿ. ಕನ್ನಡ ಸಾಹಿತ್ಯಕ್ಕೆ ಹರಿದಾಸರ ಹಾಗೂ ಹಿಂದಿ ಸಾಹಿತ್ಯಕ್ಕೆ ಭಕ್ತಿ ಪಂಥದ ಪ್ರತಿಪಾದಕರ ಕೊಡುಗೆ ಅವಿಸ್ಮರಣೀಯವಾಗಿದೆ. ಸಮಕಾಲೀನ ಸಮಾಜದ ಸಂಸ್ಕೃತಿಯನ್ನು ತಮ್ಮ ಸಾಹಿತ್ಯದಲ್ಲಿ ಹರಿದಾಸರು ಹಾಗೂ ಭಕ್ತಿ ಕವಿಗಳು ಪ್ರತಿಪಾದಿಸಿದರು. ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಬೋಧಿಸಿ ಬದುಕಿನ ಕಲೆಯ ಜೊತೆಗೆ ಜಾಗತಿಕ ಧರ್ಮವನ್ನು ಭಕ್ತಿ ಕವಿಗಳು ಹಾಗೂ ಹರಿದಾಸರು ಪ್ರತಿಪಾದಿಸಿದರು.

ಕನಕದಾಸರು ಭಕ್ತ, ದಾಸ, ಸಂತ, ಕಲಿ, ಕವಿ, ದಾರ್ಶನಿಕ, ಸಂಸ್ಕೃತಿಚಿಂತಕ, ಸಮಾಜ ಸುಧಾರಕ, ಬಂಡಾಯ ಮನೋಧರ್ಮಿ ಹಾಗೂ ಮಾನವೀಯ ಅಂತಃಕರಣಿಯೂ ಹೌದು. ಕನ್ನಡ ಸಾಹಿತ್ಯ, ದಾಸ ಸಾಹಿತ್ಯ ಹಾಗೂ ದಾಸ ಪಂಥ ಕನಕದಾಸರನ್ನು ಎಂದೂ ಮರೆಯದು. ಪುರಂದರದಾಸರ ಸಮಕಾಲೀನರಾದ ಕನಕದಾಸರು ದಾಸ ಸಾಹಿತ್ಯವನ್ನು ಮನೆ–ಮನಗಳಲ್ಲಿ ಮುಟ್ಟಿಸಿದವರು.

ಭಕ್ತೆ ಮೀರಾಬಾಯಿ ಸಂತ ಕವಿಯತ್ರಿ ಆಧ್ಯಾತ್ಮಿಕ ಚಿಂತಕಿ, ಭಾವುಕ-ಭಕ್ತ ಹೃದಯದಿಂದ, ಅಂತಃಕರಣದಿಂದ ಭಕ್ತ ಲಯದಲ್ಲಿ ಮೀರಾ ಭಜನೆಗಳು ಮೂಡಿಬಂದಿವೆ. ಹಿಂದಿ ಸಾಹಿತ್ಯಕ್ಕೆ, ಭಕ್ತಿಪಂಥಕ್ಕೆ ಮೀರಾ ಕೊಡುಗೆಯು ಗಣನೀಯವಾದುದಾಗಿದೆ. ಕಬೀರದಾಸ, ತುಲಸೀದಾಸರಂತೆ ಭಕ್ತಿ ಹಾಗೂ ಸಂತ ಸಾಹಿತ್ಯದಲ್ಲಿ ಮೀರಾಬಾಯಿ ತನ್ನದೇ ಆದ ಸಾಹಿತ್ಯವನ್ನು ಬೆಳಗಿಸಿದವಳು.

ಹಿಂದಿ ಸಾಹಿತ್ಯದಲ್ಲಿ ಮೀರಾ ಸಾಹಿತ್ಯ ಸಮೃದ್ಧವಾಗಿದೆ. ಆದರೆ ಮೀರಾಳ ಪದ, ಪದಾವಲೀಗಳು ಅಥವಾ ಭಜನೆಗಳು ಹಾಗೂ ಅವಳ ಇತರ ಸಾಹಿತ್ಯ ಕೃತಿಗಳು ಕನ್ನಡದಲ್ಲಿ ಅನುವಾದಗಳಾಗಿಲ್ಲ. ಅತೀ ವಿರಳವಾಗಿ ಕೆಲವು ಭಜನೆಗಳು ಮಾತ್ರ ಕನ್ನಡೀಕರಣಗೊಂಡಿವೆ. ಇಂದು ಮೀರಾಬಾಯಿಯ ಸಾಹಿತ್ಯ, ಭಜನೆಗಳನ್ನು, ಅವಳ ವಿಚಾರಗಳನ್ನು ಕನ್ನಡಕ್ಕೆ ತರಬೇಕಾದ ಜರೂರತೆ ಇದೆ. ಆಗ ಮೀರಾಬಾಯಿ ಕನ್ನಡಿಗರಿಗೆ ಸಂಪೂರ್ಣ ಅರ್ಥವಾಗಲು ಸಾಧ್ಯ. ಇದರೊಂದಿಗೆ ಭಕ್ತಿ ಪಂಥದಲ್ಲಿ ತಮ್ಮನ್ನು ಗುರುತಿಸಿಕೊಂಡು ಸದಾ ಹರಿಸ್ಮರಣೆ ಮಾಡಿ, ಹರಿನಾಮ ಸ್ಮರಿಸಿದ ಕನಕದಾಸರನ್ನು ನಮ್ಮ ಮನೆಮನಗಳಿಗೆ ಕರೆದು ತರಬೇಕಾಗಿದೆ. ಈ ದೃಷ್ಟಿ ಹಿನ್ನಲೆಯಿಂದ ಕನಕದಾಸ, ಮೀರಾಬಾಯಿಯ ಜೀವನ, ಹರಿಭಕ್ತೆಯ ಸಂದೇಶಗಳು, ಇವರಿಬ್ಬರ ಸಾಹಿತ್ಯಿಕ ವಿಚಾರಗಳು, ವೈಚಾರಿಕ ಸಾಮ್ಯತೆಗಳು, ತಾತ್ವಿಕ ಆಯಾಮಗಳನ್ನು ತೌಲನಿಕವಾಗಿ ನೋಡುವ ಚಿಕ್ಕ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

## ಕನಕದಾಸರ-ಮೀರಾಬಾಯಿಯರ ಜೀವನ

ಮೊದಲನೆಯದಾಗಿ ಅವರ ಜೀವನದ ಸಂಕ್ಷಿಪ್ತ ಪರಿಚಯ ಮಾಡಿಕೊಳ್ಳೋಣ.

- **ಕನಕದಾಸರ ಜೀವನ**

ಕನಕದಾಸರು ಸುಮಾರು 1508ರಲ್ಲಿ ಹಾವೇರಿ ಜಿಲ್ಲೆಯ ಶಿಗ್ಗಾಂವ್ ತಾಲೂಕಿನ ಬಾಡ ಗ್ರಾಮದಲ್ಲಿ ಬೀರಪ್ಪ ಮತ್ತು ಬಚ್ಚಮ್ಮರ ಮಗನಾಗಿ ಜನಿಸಿದರು. ಬೀರಪ್ಪ-ಬಚ್ಚಮ್ಮ ದೈವ ಭಕ್ತರು. ಮಕ್ಕಳಿಲ್ಲದ ಕೊರತೆಯನ್ನು ಅನುಭವಿಸುತ್ತಿದ್ದರು. ಮನೆದೇವರಾದ ತಿರುಪತಿ ತಿಮ್ಮಪ್ಪನಿಗೆ ಹರಕೆಯನ್ನು ಹೊತ್ತರು. ಹರಕೆಯ ಫಲವಾಗಿ ಮಗ ಜನಿಸಿದಾಗ ಅವನಿಗೆ ತಿಮ್ಮಪ್ಪನೆಂದು ಹೆಸರಿಟ್ಟರು. ಬೀರಪ್ಪನದು 78 ಗ್ರಾಮಗಳ ನಾಡಗೌಡಿಕೆ. ವಿಜಯನಗರ ಸಾಮ್ರಾಜ್ಯದ ಆಡಳಿತಕ್ಕೆ ಒಳಪಟ್ಟ ದಣ್ಣಾಯಕ ಸಾಮಂತ ವೃತ್ತಿ. ತಿಮ್ಮಪ್ಪ ಅಪ್ಪ ಒದಗಿಸಿಕೊಟ್ಟ ಶಿಕ್ಷಣ ತರಬೇತಿ; ಅವ್ವನ ಅಕ್ಕರೆಯಲ್ಲಿ ಬೆಳೆದು ನಿಂತನು. ಯುದ್ಧ ಕಲೆ, ಕುಸ್ತಿ, ಕತ್ತಿವರಸೆ, ಅಶ್ವವಿದ್ಯೆ, ಮಲ್ಲಯುದ್ಧಗಳ ಕಲೆಗಳನ್ನು ಕರಗತಮಾಡಿಕೊಂಡನು. ಅಪ್ಪನ ಅಕಾಲಿಕ ಮರಣದ ಪರಿಣಾಮ ತಿಮ್ಮಪ್ಪನ ಹೆಗಲ ಮೇಲೆ ಮಾಂಡಲಿಕ ಜವಾಬ್ದಾರಿ ಬಂದಿತು. ತಂದೆಯಂತೆಯೇ ತಿಮ್ಮಪ್ಪ ವಿಜಯನಗರದ ರಾಜರಿಗೆ ಮೆಚ್ಚುಗೆಯಾಗುವಂತೆ ಕಾರ್ಯವನ್ನು ನಿರ್ವಹಿಸಿದನು. ತರುವಾಯ ಮದುವೆಯೂ ಆಯಿತು. ನಂತರದ ದಿನಗಳಲ್ಲಿ ಅಮ್ಮನ ಸಾವು, ಮಗನ ಸಾವು, ಮಡದಿಯ ಸಾವುಗಳು ಘಟಿಸಿದವು. ಈ ಸಾವುಗಳ ಸರಮಾಲೆಯ ಜೊತೆಯಲ್ಲಿ ಯುದ್ಧವೊಂದರಲ್ಲಿ ಸೋತು ಹೋದನು. ರಣರಂಗದಲ್ಲಿ ಪೆಟ್ಟು ಬಿದ್ದಾಗ ಅಲ್ಲಿಯ ಘೋರ ದೃಶ್ಯ, ಲೌಕಿಕದ ನಶ್ವರತೆಯೂ ಕನಕನಿಗೆ ಬಹು ಪರಿಣಾಮವನ್ನು ಬೀರಿತು. ಬದುಕಿನ ಅರ್ಥವಂತಿಕೆಯಿಂದ ಮೋಕ್ಷ ಸಾಧನೆಯತ್ತ ಮನ ಮಿಡಿಯತೊಡಗಿತು. ಇದರ ಪರಿಣಾಮವಾಗಿ ಅಧಿಕಾರ, ಪದವಿ, ಬಂಧು-ಬಳಗ ಎಲ್ಲವನ್ನೂ ತ್ಯಜಿಸಿ ದಾಸನಾಗಿ, ಜಂಗಮನಾಗಿ ಸಾಗಿದನು.

ಆ ಕಾಲದಲ್ಲಿ ವೈಷ್ಣವ ಪಂಥ ಪ್ರಾಬಲ್ಯ ಹಾಗೂ ಪರಿಣಾಮಕಾರಿಯಾಗಿತ್ತು. ಆ ಧರ್ಮದಿಂದ ಆಕರ್ಷಿತನಾಗಿ ಜ್ಞಾನಮಾರ್ಗದೆಡೆಗೆ ನಡೆದನು. ಈ ಸಂದರ್ಭದಲ್ಲಿ ತಿರುಮಲೆ ತಾತಾಚಾರ್ಯರನ್ನು ಸಂದರ್ಶಿಸಿದನು. ವ್ಯಾಸರಾಯರನ್ನು

ಭೇಟಿಯಾದನು. ಪುರಂದರರ ಸಂಪರ್ಕ ಬೆಳೆಸಿದನು. ಕನಕದಾಸರು ವ್ಯಾಸರಾಯರ ಶಿಷ್ಯತ್ವ ಬೇಡಿದರು. ಆದರೆ ಕುರುಬ ಕುಲದಲ್ಲಿ ಹುಟ್ಟಿದ ಕನಕದಾಸರಿಗೆ ವ್ಯಾಸರಾಯರು ಮಠದಲ್ಲಿದ್ದ ಇತರ ಶಿಷ್ಯರಿಂದ ಅಷ್ಟು ಸುಲಭವಾಗಿ ಆದರ–ಗೌರವಗಳು ದೊರೆಯಲಿಲ್ಲ. ಕನಕದಾಸರು ಜ್ಞಾನಿ ಎಂದು ತಿಳಿದ ವ್ಯಾಸರಾಯರೇ ತಮ್ಮ ಉಳಿದ ಶಿಷ್ಯರಿಗೆ ಕನಕದಾಸರ ವ್ಯಕ್ತಿತ್ವವನ್ನು ಪರಿಚಯಿಸಿದರು.

ವ್ಯಾಸರಾಯರಿಂದ ಬೀಳ್ಕೊಂಡ ಮೇಲೆ ಎಲ್ಲಿಯೂ ಒಂದು ಕಡೆ ನಿಲ್ಲದೆ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸುತ್ತಾ, ಜನರ ಒಡನಾಟವನ್ನು ಬಯಸುತ್ತಾ, ಜನರ ಬದುಕಿನಲ್ಲಿರುವ ಅಸಮಾನತೆ, ಅಜ್ಞಾನ, ಮೌಢ್ಯ, ಕಂದಾಚಾರಗಳನ್ನು ತೆರೆದು ತೋರಿಸುತ್ತ, ಕೀರ್ತನೆಗಳನ್ನು ಹಾಡುತ್ತಾ ನಡೆದರು. ಕೀರ್ತನೆಗಳ ಜೊತೆಗೆ "ಮೋಹನ ತರಂಗಿಣಿ, ನಳಚರಿತ್ರೆ, ರಾಮಧ್ಯಾನಚರಿತೆ, ಹರಿಭಕ್ತಿಸಾರ" ಕೃತಿಗಳನ್ನು ರಚಿಸಿದರು. ಕನಕದಾಸರ ಜೀವನದರ್ಶನ ಹಾಗೂ ಕಾವ್ಯ ಸಂದೇಶವೂ ಮತ, ಧರ್ಮ, ಕಾಲ, ಸೀಮೆಗಳನ್ನು ಮೀರಿ ನಿಂತು ಇಂದಿಗೂ ಪ್ರಸ್ತುತವಾಗಿದೆ.

- **ಮೀರಾಬಾಯಿಯ ಜೀವನ**

ಕರ್ನಾಟಕದಲ್ಲಿ ಅಕ್ಕಮಹಾದೇವಿ ಹೇಗೋ ಹಾಗೆಯೇ ರಾಜಸ್ಥಾನಕ್ಕೆ ಮೀರಾಬಾಯಿ. ಕ್ರಿ.ಶ. 1504ರಲ್ಲಿ ರಾಜಸ್ಥಾನದ ಚೌಕಾರಿ ಎಂಬಲ್ಲಿ ಮೀರಾಬಾಯಿ ಜನಿಸಿದರು. ತಂದೆ ಜೋಧಪುರದ ಸ್ಥಾಪಕ ರಾವ್ ಜೋಧಾವಿ ರಾಥೋರರ ಮಗ ರತನ ಸಿಂಗ. ಮೀರಾಬಾಯಿ ರಾಜ ಮನೆತನಕ್ಕೆ ತಕ್ಕಂತೆ ಬೆಳೆದುಬಂದಳು. ಸಂಗೀತ, ಬಿಲ್ವಿದ್ಯೆ, ಶಾಸನಗಳ ಜ್ಞಾನ, ರಥ ಚಾಲನೆಗಳಲ್ಲಿ ಅವಳು ತರಬೇತಿ ಹೊಂದಿದ್ದಳು. ಕುಟುಂಬದಲ್ಲಿ ಶ್ರೀಕೃಷ್ಣನ ಆರಾಧನೆ ವಿಶೇಷವಾಗಿದ್ದುದರಿಂದ ಅವಳು ಬಾಲ್ಯದಲ್ಲಿಯೇ ಕೃಷ್ಣನ ಭಕ್ತೆಯಾದಳು.

ಒಂದು ಸಲ ಮೀರಾಬಾಯಿ ಮದುವೆ ಮೆರವಣಿಗೆಯೊಂದನ್ನು ಕಂಡು "ಅಮ್ಮ ನನ್ನನ್ನು ವರಿಸುವ ವರ ಯಾರು?" ಎಂದು ಮುಗ್ಧತೆಯಿಂದ ಕೇಳಿದಳು. ತಾಯಿ ನಸುನಗುತ್ತಾ ಬಾಲೆಗೆ ಶ್ರೀಕೃಷ್ಣನ ವಿಗ್ರಹವನ್ನು ತೋರಿಸಿ "ನೋಡು ಮಗಳೆ, ಇವನು ಶ್ರೀಕೃಷ್ಣ, ಈ ಸುಂದರಾಂಗನೇ ನಿನ್ನ ಭಾವಿ ಪತಿ" ಎಂದಳು. ಆ ಮಾತು ಮೀರಾಳ ಬಾಲ್ಯದಲ್ಲಿ ಮನಸ್ಸಿನಲ್ಲಿ ಆಳವಾಗಿ ಬೇರೂರಿತು.

ಮೀರಾ ಸಹೃದಯಿ, ಮೃದು ಭಾಷಿಣಿ ಹಾಗೂ ಮಧುರ ಕಂಠದ ಗಾಯಕಿ. ಅವಳ ಚೆಲುವು, ಕಂಠಸಿರಿ, ವ್ಯಕ್ತಿತ್ವ ಎಲ್ಲ ಕಡೆದೂ ಪ್ರಶಂಸೆಗೆ ಪಾತ್ರವಾಯಿತು. ಮೇವಾರದ ರಾಜ ರಾಣಾ ಸಂಗ್ರಾಮಸಿಂಗ ಮೀರಾಬಾಯಿಯನ್ನು ತನ್ನ ಮಗ ಭೋಜರಾಜನಿಗೆ ತಂದುಕೊಳ್ಳಲು ಆಶಿಸಿದನು. ಅವಳ ತಂದೆಯನ್ನು ಕಂಡನು. ಮೀರಾ ಹಿರಿಯರ ಮಾತಿಗೆ ತಲೆಬಾಗಿ 1513ರಲ್ಲಿ ಭೋಜರಾಜನನ್ನು ವಿವಾಹವಾದಳು. ತನ್ನ ಗೃಹಕೃತ್ಯಗಳನ್ನು ಮುಗಿಸಿ, ಮೀರಾ ನಿತ್ಯವೂ ಶ್ರೀಕೃಷ್ಣನ ದೇವಾಲಯಕ್ಕೆ ತೆರಳಿ ಭಕ್ತಿಪರವಶಳಾಗಿ ಹಾಡಿ ಕುಣಿಯುತ್ತಿದ್ದಳು. ಅವಳ ಅತ್ತೆ, ನಾದಿನಿ ಹಾಗೂ ಇತರ ಬಂಧು–ಬಳಗದವರಿಗೆ ಮೀರಾಳ ಈ ಭಕ್ತಿಪರವಶತೆಯು ಇಷ್ಟವಾಗಲಿಲ್ಲ. ಆದರೆ ಮೀರಾ ನಿಷ್ಠುರವಾಗಿ ತನ್ನ ಮನದ ಇಂಗಿತವನ್ನು ಎಲ್ಲರಿಗೂ ಹೇಳಿಯೇ ಬಿಟ್ಟಳು. "ನಾನೆಂದೋ ಶ್ರೀಕೃಷ್ಣನಿಗೆ ನನ್ನ ಬದುಕನ್ನು ಸಮರ್ಪಿಸಿಬಿಟ್ಟಿರುವೆನು". ಮೀರಾಳ ಕುರಿತು ಭೋಜರಾಜನಿಗೆ "ನಿನ್ನ ಹೆಂಡತಿ ಯಾವನೋ ಪ್ರೇಮಿಯನ್ನು ಭೇಟಿಯಾಗಲು ಪ್ರತಿನಿತ್ಯ ದೇವಸ್ಥಾನಕ್ಕೆ ಹೋಗುವಳು" ಎಂದು ಚಾಡಿ ಹೇಳಿದರು. ಮೊದಮೊದಲು ಭೋಜರಾಜ ಚಾಡಿ ಮಾತುಗಳನ್ನು ಕೇಳಲಿಲ್ಲ. ಆದರೆ ಒಂದು ದಿನ ಮೀರಾ ಶ್ರೀಕೃಷ್ಣನ ವಿಗ್ರಹದೊಂದಿಗೆ ತನ್ಮಯಳಾಗಿ ಮಾತನಾಡುತ್ತಿರುವುದನ್ನು ಕಂಡು ಭೋಜರಾಜನು ಸಹಿಸಲಿಲ್ಲ. ಅಲ್ಲಿ ಬೇರೆ ಯಾವನೋ ಪ್ರೇಮಿ ಇರಬಹುದೆಂದು ಊಹಿಸಿ "ಮೀರಾ ಎಲ್ಲಿ ನಿನ್ನ ಪ್ರೇಮಿ ತೋರಿಸು" ಎಂದು ಗರ್ಜಿಸಿದನು. ಮೀರಾ ಸಂಪೂರ್ಣ ಕೃಷ್ಣನಲ್ಲಿ

ಮೈಮರೆತಿದ್ದಳು. "ನನ್ನ ಪ್ರೇಮಿ ನವನೀತ ಚೋರ ಶ್ರೀಕೃಷ್ಣ" ಎಂದು ಕನವರಿಸುವಂತೆ ಹೇಳಿದಳು. ಭೋಜರಾಜನಿಗೆ ಬೇಸರವಾದರೂ ಮಡದಿಯ ಭಾವನೆಗಳನ್ನು ಗೌರವಿಸಿ ಅನ್ಯೋನ್ಯತೆಯಿಂದಲೇ ಇದ್ದನು.

ಮೀರಾಳನ್ನು ಕೊಲ್ಲಲು ನಾನಾ ತಂತ್ರಗಳನ್ನು ಅರಮನೆಯಲ್ಲಿ ಹೆಣೆದರು. ಕೃಷ್ಣ ಭಕ್ತಿಯಿಂದ ಮೀರಾ ಸಾವು, ತೊಂದರೆಗಳನ್ನೆಲ್ಲ ಮೆಟ್ಟಿನಿಂತಳು. ಈ ಎಲ್ಲಾ ಘಟನೆಗಳಿಂದ ನೊಂದ ಮೀರಾ ಗೋಸ್ವಾಮಿ ತುಳಸಿದಾಸರಿಗೆ ಪತ್ರ ಬರೆದು ಸಲಹೆ ಪಡೆದಳು. ಅವರು ಬಾಲ ಪ್ರಹ್ಲಾದನಂತೆ, ಬೃಂದಾವನದ ಗೋಪಿಕೆಯರಂತೆ ಶ್ರೀಕೃಷ್ಣನಲ್ಲಿ ಅಚಲವಾದ ಭಕ್ತಿ ಇಡುವಂತೆ ಸಲಹೆ ನೀಡಿದರು. ಅವರ ಮಾರ್ಗದರ್ಶನದಲ್ಲಿ ಶ್ರೀಕೃಷ್ಣನಲ್ಲಿ ಭಕ್ತಿ ಭಾವ ಹೊಂದಿ ತನ್ನೆಲ್ಲ ಕಷ್ಟ–ದುಃಖ–ಸಂಕಟಗಳನ್ನು ಮರೆತಳು.

ಮೊಘಲ್ ಸಾಮ್ರಾಟನಾದ ಅಕ್ಬರನು, ಗಾಯಕನಾದ ತಾನಸೇನನೊಂದಿಗೆ ಒಂದು ದಿನ ಮೀರಾಳ ಭಕ್ತಿ ಗಾಯನ ಕೇಳಲು ಆಗಮಿಸಿದನು. ಮೀರಾಳಿಗೆ ಅಕ್ಬರ್ ಪದಾಭಿವಂದನೆ ಮಾಡಿ, ಅವಳ ಭಕ್ತಿಪದಗಳನ್ನು ಮೆಚ್ಚಿ ಹಾರವನ್ನು ಕಾಣಿಕೆಯಾಗಿ ನೀಡಿದನು. ಭೋಜರಾಜನು ಈ ಘಟನೆಯಿಂದ ಕುಪಿತನಾಗಿ "ನದಿಯಲ್ಲಿ ಮುಳುಗಿ ಸಾಯುವಂತೆ ಮೀರಾಳಿಗೆ ಅಜ್ಞಾಪಿಸಿದನು. ಮೀರಾ ನದಿಯಲ್ಲಿ ಮುಳುಗಿದಾಗ ಶ್ರೀಕೃಷ್ಣನೇ ರಕ್ಷಿಸಿ ನೀನಿನ್ನು ಸ್ವತಂತ್ರಳು ಎಂದು ಹೇಳಿದನೆಂಬ ಪ್ರತೀತಿ ಪಚಲಿತದಲ್ಲಿದೆ". ನಂತರ ಮೀರಾ ಭೋಜರಾಜನನ್ನು ತೊರೆದರೂ, ಭೋಜರಾಜ ಮಾತ್ರ ಮೀರಾಳನ್ನು ತಾನು ಬದುಕಿರುವ ತನಕವೂ ಗೌರವಿಸಿದನಂತೆ.

ಮುಂದೆ ಮೀರಾ ಬೃಂದಾವನಕ್ಕೆ ತೆರಳಿ ಗೋವಿಂದ ಮಂದಿರದಲ್ಲಿ ಊಂಚವೃತ್ತಿಯನ್ನು ಅವಲಂಬಿಸಿದಳು. ಪತಿ ಭೋಜರಾಜನು ಕ್ಷಮೆ ಬೇಡಿ ಮತ್ತೆ ಅರಮನೆಗೆ ಹಿಂತಿರುಗುವಂತೆ ಒತ್ತಾಯಿಸಿದಾಗ ಮೀರಾ "ಕೃಷ್ಣ ಸಾಮ್ರಾಜ್ಯ ತೊರೆದು ಬರಲಾರೆ" ಎಂದಳು. ಬೃಂದಾವನದ ಮುಖಂಡನಾಗಿದ್ದ ಜೀವಾ ಗೋಸಾಮಿ ಇಲ್ಲಿ ಮಹಿಳೆಯರು ವಾಸಿಸುವುದು ಯೋಗ್ಯವಲ್ಲ ಎಂದು ಹೇಳಿದನು. ಆಗ ಮೀರಾ "ಶ್ರೀಕೃಷ್ಣನ ಹೊರತು ಬೇರೆ ಯಾರೂ ನನ್ನ ಪಾಲಿಗೆ ಪುರುಷರಲ್ಲ" ಎಂದು ಉತ್ತರಿಸಿದಾಗ ಗೋಸಾಯಿ ತಲೆತಗ್ಗಿಸಿದನು.

ಮೀರಾ ಪುನಃ ಮೇವಾಡಕ್ಕೆ ಬಂದು ಪತಿ ಭೋಜರಾಜನಿಗೆ ಆಧ್ಯಾತ್ಮದ ಮಾರ್ಗದರ್ಶನ ನೀಡಿ ಬೃಂದಾವನಕ್ಕೆ ಹಿಂತಿರುಗಿದಳು. ಶ್ರೀಕೃಷ್ಣ ಜನ್ಮಾಷ್ಟಮಿ ದಿನ ಮೀರಾ ತನ್ನ ಭಕ್ತಿ ಗೀತೆಗಳನ್ನು ಹಾಡಿ ಕುಣಿದಳು. ಮೀರಾ ಭಜನೆಗಳಾದ "ಮೇರೆ ಜನನ ಮರಣ ಕೇ ಸಾಥಿ, ಮೇರೆ ತೋ ಗಿರಿಧರ ಗೋಪಾಲ" ಅಲ್ಲಿದ್ದವರ ಹೃದಯಗಳನ್ನು ಈ ಪದಗಳು ಕರಗಿಸಿದವು. ಮೀರಾ 'ಗಿರಿಧಾರಿ ನನ್ನನ್ನು ಕರೆಯುತ್ತಿದ್ದಾನೆ' ಎಂದು ವಿಗ್ರಹದ ಮುಂದೆ ಭಕ್ತಿಯಿಂದ ಉರುಳಿದಳು. ಗರ್ಭಗುಡಿಯ ಬಾಗಿಲು ತಂತಾನೇ ಮುಚ್ಚಿಕೊಂಡಿತು. ಬಾಗಿಲುಗಳು ತೆರೆದುಕೊಂಡ ನಂತರ ಮೀರಾ ದೇಹ ಅಲ್ಲಿರಲಿಲ್ಲ. ಅವಳುಟ್ಟಿದ್ದ ಸೀರೆ ವಿಗ್ರಹವನ್ನು ಆವರಿಸಿತ್ತೆಂದು ಹೇಳಲಾಗುತ್ತದೆ.

ಮೀರಾ ಭಜನೆಗಳನ್ನು ಮಾತ್ರವಲ್ಲದೆ ಅನೇಕ ಗ್ರಂಥಗಳನ್ನು ಬರೆದಿರುವಳೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. "ಗೀತ ಗೋವಿಂದ ಕೀ ಟೀಕಾ, ನರಸೀಜೇ ರೋ ಮಾಹರೋ, ಫುಟಕರ ಪದ, ರಾಗ ಸೋರಠ ಸಂಗ್ರಹ, ಗೋವಿಂದ ಹಾಗೂ ಮೀರಾ ಕೀ ಮಲ್ಹಾರ, ಮೀರಾ ಕೀ ಪದಾವಲಿ" ಇವು ಮೀರಾಳ ಪ್ರಮುಖ ಕೃತಿಗಳು. ಕನ್ನಡ ಸಾಹಿತ್ಯದಲ್ಲಿ ಅಕ್ಕಮಹಾದೇವಿ, ಚೆನ್ನಮಲ್ಲಿಕಾರ್ಜುನನೇ ತನ್ನ ಪತಿಯೆಂದು ನಂಬಿ ಅವನಲ್ಲಿಯೇ ಐಕ್ಯಳಾದಂತೆ, ಮೀರಾ 'ಗಿರಿಧರ ಗೋಪಾಲ'ನೊಂದಿಗೆ ಭಾವನಾತ್ಮಕವಾದ ಸಹಚರ್ಯವನ್ನು ಬೆಳೆಸಿಕೊಂಡು ಲೌಕಿಕದ ಸಂಬಂಧಗಳಿಂದ ದೂರ ನಿಂತಳು. ಭಕ್ತಿ ಕವಿಯತ್ರಿಯಾದ ಮೀರಾಳ ಭಜನೆಗಳು ಭಾರತೀಯ ಸಾಹಿತ್ಯದಲ್ಲಿ ಸದಾಕಾಲ ಕೇಳಿ ಬರುತ್ತವೆ.

## ಕನಕ–ಮೀರಾ ಹೆಸರಿನ ವಿಶೇಷತೆ

ಉತ್ತುಂಗಕ್ಕೇರಿದ ಮಹಾ ವ್ಯಕ್ತಿಗಳ ಕುರಿತು ವಾದ–ವಿವಾದಗಳು ಹೊಸದಲ್ಲ. ಕನಕದಾಸರ ಹಾಗೂ ಮಿರಾಬಾಯಿಯ ಕುರಿತು ಅಂತಹ ಕಥೆಗಳು ಪ್ರಚಲಿತದಲ್ಲಿವೆ.

- **ಕನಕದಾಸರು**

ಒಮ್ಮೆ ತಿಮ್ಮಪ್ಪ ನಾಯಕ ಬಾಡ ಗ್ರಾಮದ ಹತ್ತಿರ ಬುರುಜು ಅಥವಾ ಅರಮನೆಯನ್ನು ಕಟ್ಟಿಸುವ ಸಲುವಾಗಿ ಭೂಮಿಯನ್ನು ಅಗೆಸುತ್ತಿದ್ದ ಸಂದರ್ಭದಲ್ಲಿ ಭೂಗರ್ಭದಲ್ಲಿ ಏಳು ಕೊಪ್ಪರಿಗೆ ನಿಕ್ಷೇಪ ದೊರೆಯಿತು. ಅಪಾರವಾಗಿ ದೊರೆತ ಕನಕವನ್ನು ಸ್ವಂತ ಕಾರ್ಯಗಳಿಗೆ ಬಳಸದೇ ಬಡಬಗ್ಗರಿಗೆ ಅನ್ನ ಸಂತರ್ಪಣೆ ಕಾರ್ಯಕ್ಕೆ, ಗುಡಿ ಗೋಪುರಗಳ ರಚನೆಗೆ ಹಾಗೂ ಜೀರ್ಣೋದ್ಧಾರ ಕಾರ್ಯಗಳಿಗಾಗಿ ಬಳಸಿದನು. ಹೇರಳವಾಗಿ ದೊರೆತ ಹಣವನ್ನು ಉದಾರ ಮನಸ್ಸಿನಿಂದ ಸದ್ವಿನಿಯೋಗ ಮಾಡಿದ ನಿಮಿತ್ಯ ತಿಮ್ಮಪ್ಪನ ಕೀರ್ತಿ ಎಲ್ಲ ಕಡೆಗೂ ವ್ಯಾಪಿಸಿತು. ‘ಕನಕ’ದಿಂದ ಪ್ರಖ್ಯಾತನಾದ ತಿಮ್ಮಪ್ಪನನ್ನು ಜನರು ‘ಕನಕ’, ‘ಕನಕ ನಾಯಕ’ ಎಂದು ಕರೆದರು. ಕಾಲಕ್ರಮೇಣ ತಿಮ್ಮಪ್ಪ ಹೆಸರು ಮಾಯವಾಗಿ ಕ್ರಮೇಣ ‘ಕನಕ’, ‘ಕನಕಪ್ಪ ನಾಯಕ’, ‘ಕನಕದಾಸ’ರಾಗಿ ಉಳಿದರು.

- **ಮೀರಾಬಾಯಿ**

ಮೀರಾಬಾಯಿ ಎಂದರೆ ‘ಈಶ್ವರನ ಪತ್ನಿ’ ಎಂದು ಕೆಲವು ವಿದ್ವಾಂಸರು ಅರ್ಥೈಸಿದ್ದಾರೆ. ಕಬೀರದಾಸರು ತಮ್ಮ ಮೂರು ದೋಹೆಗಳಲ್ಲಿ ಉಲ್ಲೇಖಿಸಿರುವ ‘ಮೀರಾ’ ಶಬ್ದಕ್ಕೆ ಪರಮಾತ್ಮ, ಈಶ್ವರ ಎಂದು ಅರ್ಥಯಿಸಿ ತಮ್ಮ ವಾದವನ್ನು ಕೆಲವು ವಿದ್ವಾಂಸರು ಪುಷ್ಟೀಕರಿಸಿದ್ದಾರೆ. ಮೀರಾ ಶಬ್ದವು ಮೂಲತಃ ಪಾರಸಿ ಶಬ್ದವಾಗಿದ್ದು, ಮೀರಾ ಎಂಬ ಶಬ್ದದ ಅರ್ಥವು ಶಹಜಾದಾ ಎಂದಾಗುತ್ತದೆ. ಮೀರಾ ಇದು ಮೀರ ಶಬ್ದದ ಬಹುವಚನ ರೂಪವಾಗಿದೆ ಎಂದು ವಿದ್ವಾಂಸರು ಗ್ರಹಿಸಿದ್ದಾರೆ. ಸಂತಾನಕ್ಕಾಗಿ ಮೀರಾಬಾಯಿಯ ತಾಯಿಯು ‘ಮೀರಾ ಸಾಹೇಬ ಅಜಮೇರಿ’ ಅನುಗ್ರಹ ಪಡೆದಿದ್ದಕ್ಕಾಗಿ ಇವಳ ಹೆಸರು ‘ಮೀರಾ’ ಎಂದಾಯಿತು ಎಂದು ಹಲವರು ಅಭಿಪ್ರಾಯ ಪಡುತ್ತಾರೆ. ಮೀರಾ ಶಬ್ದದ ಉತ್ಪತ್ತಿಯನ್ನು ಸಂಸ್ಕೃತದ ‘ಮಿಹಿರ’ ಎಂದು ಕೆಲವರು ಹೇಳಿದ್ದಾರೆ. ವಿದ್ವಾಂಸರು ಮೇಡತ–ಮೀರತಾ–ಮೀರ–ಮೀರಾ ಎಂಬ ಶಾಬ್ದಿಕ ಪರಿವರ್ತನ ಪ್ರಕ್ರಿಯೆಯತ್ತ ನಮ್ಮ ಗಮನವನ್ನು ಸೆಳೆಯುತ್ತಾರೆ. ಸಂಸ್ಕೃತ ಕೋಶದಲ್ಲಿ ‘ಮೀರ’ ಶಬ್ದದ ಅರ್ಥವು ಸಮುದ್ರ ಎಂದಾಗುತ್ತದೆ. ಮೀರಾದ ‘ಆ’ ಕಾರಂತವು ಲಕ್ಷ್ಮೀವಾಚಕವಾಗಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆದರೂ ಕೂಡಾ ‘ಮೀರಾ’ ಹೆಸರಿನ ಕುರಿತು ವಿದ್ವಾಂಸರಲ್ಲಿ ಒಮ್ಮತ ಅಭಿಪ್ರಾಯ ಇನ್ನೂ ಮೂಡಿಬಂದಿಲ್ಲ.

## ಕನಕದಾಸರ ಹಾಗೂ ಮೀರಾಬಾಯಿಯ ಸಾಹಿತ್ಯದ ವೈಶಿಷ್ಟ್ಯತೆಗಳು

ಕನಕದಾಸರ ಇತರ ಕೃತಿಗಳಿಗಿಂತ ಅವರ ಕೀರ್ತನೆಗಳು, ಮೀರಾಳ ಇತರ ಗ್ರಂಥಗಳಿಗಿಂತ ಅವರ ಭಜನೆಗಳು ಹೆಚ್ಚು ಜನಪ್ರಿಯವಾಗಿವೆ. ಕೀರ್ತನೆ ಹಾಗೂ ಭಜನೆಗಳನ್ನು ಕೇಂದ್ರವಾಗಿರಿಸಿಕೊಂಡು ಅಧ್ಯಯನದ ಮೇಲೆ ಬೆಳಕು ಚೆಲ್ಲುವ ಚಿಕ್ಕ ಪ್ರಯತ್ನವಿದು.

- **ಕನಕದಾಸರ ಸಾಹಿತ್ಯದ ವೈಶಿಷ್ಟ್ಯತೆ**

ಕನಕದಾಸರು ಸ್ವತಂತ್ರ ಮನೋಧರ್ಮ, ವಿಶಿಷ್ಟ ಆಲೋಚನ ಪರ ಚಿಂತಕರು, ನೇರ ನುಡಿ ಹಾಗೂ ಜನಸಾಮಾನ್ಯರ ಜೀವನಾನುಭವಗಳಿಂದ ಪಡೆದುಕೊಂಡ ಅವರ ಅಭಿವ್ಯಕ್ತಿಯು ಅನುಭವಜನ್ಯವಾದುದು. ಇಹ–ಪರಗಳ ಮಾರ್ಗವನ್ನು ತೋರಿಸುತ್ತದೆ. ಅವರ ಕೀರ್ತನೆಗಳು ಸಂಗೀತ ಕ್ಷೇತ್ರಕ್ಕೆ ಹೊಸ ಮಾರ್ಗವನ್ನು ನಿರ್ಮಿಸಿವೆ.

ಕನಕದಾಸರ ಕೀರ್ತನೆಗಳು ಬಹು ವಿಷಯ, ಬಹು ಆಯಾಮಗಳಿಂದ ಕೂಡಿವೆ. ಅಲ್ಲಿರುವ ಭಾಷೆ, ರಚನೆ ಓದುಗರ ಮನಮುಟ್ಟುವವು. ಚಿಂತನೆಗೂ ಹಚ್ಚುವವು. ತಾವು ಸತ್ಯವನ್ನು ಅರಸುತ್ತಾ ಹೊರಟು ಜನರಿಗೂ ಅದರ ಅರಿವನ್ನು ಬಿತ್ತಿದರು. ಕೇವಲ ಭಕ್ತಿಗೆ ಮಾತ್ರ ಸೀಮಿತರಾಗಿ ಉಳಿಯದೇ ಮನುಷ್ಯ ಸಮಾಜದ ಡೊಂಕುಗಳನ್ನು ಎತ್ತಿ ಹೇಳಿ ತಿದ್ದಿದರು. ಜಾತಿ, ಮತ, ಕುಲ ಮೀರಿ ನಿಂತು ಮಹಾಮಾನವತಾವಾದ ಮಂಡಿಸಿದರು. ಉದಾಹರಣೆಗೆ: "ಸ್ನಾನ ಮಾಡಿರೊ ಜ್ಞಾನ ತೀರ್ಥದಲ್ಲಿ" ಕೀರ್ತನೆ

ಸ್ನಾನ ಮಾಡಿರೊ ಜ್ಞಾನ ತೀರ್ಥದಲ್ಲಿ
ಮಾನವರೆಲ್ಲ ಮೌನದೊಳಗೆ ನೀರು ॥ಪ॥
ತನ್ನ ತಾನರಿತುಕೊಂಬುದೆ ಒಂದು ಸ್ನಾನ
ಅನ್ಯಾಯ ಮಾಡದಿರುವುದೊಂದು ಸ್ನಾನ
ಅನ್ನದಾನವ ಮಾಡುವುದೊಂದು ಸ್ನಾನ – ಹರಿ
ನಿನ್ನ ಧ್ಯಾನವೆ ನಿತ್ಯ ಗಂಗಾ ಸ್ನಾನ ॥1॥
ಪರಸತಿಯ ಭ್ರಮಿಸದಿದ್ದರೆ ಒಂದು ಸ್ನಾನ
ಪರನಿಂದೆಯ ಮಾಡದಿದ್ದರೊಂದು ಸ್ನಾನ
ಪರೋಪಕಾರ ಮಾಡುವುದೊಂದು ಸ್ನಾನ
ಪರತತ್ವ ಅರಿತುಕೊಂಬುದೆ ಒಂದು ಸ್ನಾನ ॥2॥
ಸಾಧು ಸಜ್ಜನರ ಸಂಗವೆ ಒಂದು ಸ್ನಾನ
ಭೇದಾಭೇದವಳಿದೊಡೆ ಒಂದು ಸ್ನಾನ
ಆದಿಮೂರತಿ ಕಾಗಿನೆಲೆ ಕಾಗಿನೆಲೆ ಆದಿಕೇಶವ
ಪಾದ ಧ್ಯಾನವೆ ನಿತ್ಯ ಗಂಗಾ ಸ್ನಾನ ॥3॥

ಕನಕದಾಸರು 'ಸ್ನಾನ' ಹೊರ ಮೈ ಶುದ್ಧತೆಗೆ ಮಾತ್ರವಲ್ಲ ಅಂತರಂಗ–ಬಹಿರಂಗ ಶುದ್ಧತೆಯ ಜೊತೆಗೆ ನಮ್ಮನ್ನು 'ಜ್ಞಾನಕ್ಷೇತ್ರಕ್ಕೆ' ಕರೆದೊಯ್ಯುವ ತೀರ್ಥವಾಗಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಈ ಕೀರ್ತನೆಯ ಭಾಷೆ ಸರಳವಾಗಿದ್ದು ಅಭಿವ್ಯಕ್ತಿಯು ಸಹಜವಾಗಿದ್ದು ಓದುಗರನ್ನು ಹೊಸ ಚಿಂತನೆಗೆ ತೊಡಗಿಸುವುದು. 'ಸ್ನಾನ' ಪದೇ ಪದೇ ಕೀರ್ತನೆಯ ಸಾಲಿನಲ್ಲಿ ಬಂದಾಗಲೂ ಅಲ್ಲಿ ಹೊಸ ಹೊಸ ಅರ್ಥಗಳ ಹೊಳಹುಗಳನ್ನು ನೀಡುವುದು. ಇದು ಕನಕದಾಸರ ಭಾಷಿಕ ಶಕ್ತಿ ಹಾಗೂ ಚಿಂತನಾಪರತೆ ಸಾಮಾಜಿಕ ಕಳಕಳಿಯ ಜೊತೆಗೆ ಇಹಪರಗಳ ಮೌಲ್ಯವನ್ನು ಸಾರಿ ಸಾರಿ ಹೇಳುತ್ತದೆ.

- **ಮೀರಾಬಾಯಿಯ ಸಾಹಿತ್ಯದ ವೈಶಿಷ್ಟ್ಯತೆ**

ಮೀರಾಬಾಯಿ ವೈಷ್ಣವ ಸಂಪ್ರದಾಯದ ಪ್ರತಿನಿಧಿಯಾಗಿ ಭಾರತೀಯ ಕಾವ್ಯ ಹಾಗೂ ಆಧ್ಯಾತ್ಮಿಕ ಚರಿತ್ರೆಯಲ್ಲಿ ದಾಖಲೆಯಾದವಳು. ಮೀರಾ ಉದ್ದೇಶಪೂರ್ವಕವಾಗಿ ಗೀತೆಯನ್ನು ರಚಿಸಿದವಳಲ್ಲ. ಭಕ್ತಿ ಪರವಶತೆಯಲ್ಲಿ ಅವಳು ತೃಪ್ತಿ ಹೊಂದಿ ಹೇಳಿಕೊಂಡ ಶಬ್ದಗಳೇ ಸುಮಧುರ ಲಯವಾಗಿ, ಭಜನೆಗಳಾಗಿ ಹೊರಹೊಮ್ಮಿವೆ. ಪ್ರೇಮವು ಮೀರಾಳ ಕಾವ್ಯದ ಸ್ಥಾಯೀಭಾವವಾಗಿದೆ. (ಡಿವೈನ್ ಲವ್) ದಿವ್ಯ ಪ್ರೇಮದ ಅಭಿವ್ಯಕ್ತಿಯೊಂದಿಗೆ ಭಕ್ತಿರಸ ಹರಿಸಿದಳು. ಸದಾ ಪ್ರೇಮ ತಪಸ್ವಿಯಾಗಿ ಪ್ರಿಯತಮನ ಮಿಲನಕ್ಕಾಗಿ ತಲ್ಲಣಗೊಂಡ ಅವಳ ಭಾವನೆಗಳು ವಿರಹ ಗೀತೆಗಳಾಗಿ ಮೇಲ್ನೋಟಕ್ಕೆ ಕಂಡರೂ ಶ್ರೀಕೃಷ್ಣನ ಮೇಲಿನ ಅಚಲ ನಂಬಿಕೆ, ದೈವೀ ಪ್ರೇಮ, ತನ್ನ ಜೀವವನ್ನೇ ಆತನಿಗಾಗಿ ಸಮರ್ಪಿಸಿ ನಿಂತ ನಿತ್ಯ ಭಕ್ತೆ. ಮೀರಾಳ ಕೃಷ್ಣ ಕಾವ್ಯವು ಹಿಂದಿ ಕಾವ್ಯಕ್ಕೆ, ಅಲ್ಲಿರುವ ನಾದ, ಶೃತಿ, ಸ್ವರ, ಲಯ ಹಾಗೂ ಲಾಲಿತ್ಯಗಳು ಸಂಗೀತ ಕ್ಷೇತ್ರಕ್ಕೆ ವಿಶೇಷ ಮೆರುಗನ್ನು ನೀಡಿದೆ.

ಉದಾಹರಣೆ:

ಮೈನೇ ಸಾರಾ ಜಂಗಲ ಡೂಂಢಾರೇ
ಜೋಗಿಡಾ ನ ಪಾಯಾ ॥ಟೇಕ॥
ಕಾನಾ ಬಿಚಕುಂಡಲ, ಜೋಗಿ ಗಲೇ ಬಿಚ ಸೇಲೀ
ಘರಘರ ಅಲಖ ಜಗಾಯ ರೇ
ಬಾಈ ಮೀರಾಕೇ ಪ್ರಭು । ಗಿರಿಧರ ನಾಗರ,
ಸಬದ ಕಾ ಧ್ಯಾನ ಲಗಾಯೇ ರೇ ॥

ಹೇ ಯೋಗಿ ಕೃಷ್ಣ । ನಾನು ಇಡೀ ಅಡವಿ ತುಂಬ ಹುಡುಕಿ ಅಲೆದೆ, ನಿನ್ನ ದರ್ಶನವಾಗಲೇ ಇಲ್ಲ. ನಿನ್ನನ್ನು ಪಡೆಯಲಿಕ್ಕೆಂದೇ ನಾನು ಕಿವಿಗಳಲ್ಲಿ ಕುಂಡಲವನ್ನು, ಕೊರಳಲ್ಲಿ ಮಾಲೆಯನ್ನು ಧರಸಿ ಮನೆಮನೆಗೆ ಹೋಗಿ ಅಲಖ ಎಂದು ನುಡಿದು ತಿರುಗುತ್ತೇನೆ. ಹೇ ಗಿರಿಧರ ನಾಗರ ಪ್ರಭುವೇ ನಾನು ನಿನಗಾಗಿ ಶಬ್ದಮಯದ (ಶಬ್ದ ಬ್ರಹ್ಮದ) ಧ್ಯಾನ ಮಾಡುತ್ತೇನೆ.

ಮೀರಾ ದೈವ ಸಾಕ್ಷಾತ್ಕಾರದ ಮೂಲಕ ಜೀವನದ ಅಪೂರ್ಣತೆಯನ್ನು ಗೆಲ್ಲಲು ಬಯಸಿದವಳು. ಜೀವನದುದ್ದಕ್ಕೂ ದೇವನ ಸಾಕ್ಷಾತ್ಕಾರದ ಬಯಕೆ, ಹುಡುಕಾಟವಿದೆ. ಭಕ್ತಿಯ ಸಾಧನೆಯ ಮೂಲಕ ಆತ್ಮಾನಂದವಾಗಿ ಭಗವಂತ ಸಾಕ್ಷಾತ್ಕಾರವಾಗುವದು ಎಂಬುದು ಮೀರಾಳ ಭಜನೆಗಳಿಂದ ತಿಳಿದುಬರುತ್ತದೆ.

## ಕನಕದಾಸ–ಮೀರಾ ಸಾಹಿತ್ಯದ ತಾತ್ವಿಕ ಆಯಾಮಗಳು

ಕನಕದಾಸರ ಕೀರ್ತನೆಗಳು, ಮೀರಾಬಾಯಿಯ ಪದಗಳು ಇಂದಿಗೂ ಜನಮಾನಸದಲ್ಲಿ ಸೇರಿ ಹಚ್ಚಹಸಿರಾಗಿ ಉಳಿದಿವೆ. ಇವರಿಬ್ಬರ ಬರಹಗಳನ್ನು ಓದಿದವರು, ಅನುಸರಿಸಿದವರು, ಇವರ ಹಾಡುಗಳನ್ನು ಹಾಡಿದವರು ನಮ್ಮ ಮುಂದೆಯೇ ಇದ್ದಾರೆ. ವೈಯಕ್ತಿಕವಾಗಿ ನನ್ನ ಅನಿಸಿಕೆ ಯಾವುದೇ ಕೃತಿ, ವ್ಯಕ್ತಿಯನ್ನು ಕುರಿತು ಮೂರು ರೀತಿಯ ಓದುಗಳನ್ನು ಕಾಣುತ್ತೇವೆ.

1) ಓದಿಗಾಗಿ ಓದು – ಉದಾಹರಣೆಗೆ: ಕನಕದಾಸರು ಮತ್ತು ಮೀರಾಬಾಯಿ.
2) ಓದಿದನ್ನು ಅರ್ಥೈಸಿಕೊಳ್ಳುವ ಪ್ರಯತ್ನ ಎರಡನೆಯದು. ಉದಾಹರಣೆಗೆ: ಕನಕದಾಸರ ಕೀರ್ತನೆಗಳಲ್ಲಿ ಯಾವ ಅಂಶಗಳಿವೆ? ಮೀರಾಬಾಯಿಯ ಭಜನೆಗಳು ಸಾಮಾಜಿಕವಾಗಿ ಏನನ್ನು ಸಾರುತ್ತವೆ?
3) ಯಾವುದೇ ಲೇಖನ, ಲೇಖಕ ನಮ್ಮ ಮನಸ್ಸನ್ನು ಪ್ರವೇಶಿಸಿ ಚಿಂತನೆಗೆ ಹಚ್ಚಬೇಕು. ದುರಂತವೆಂದರೆ ನಾವುಗಳು ಎರಡನೇ ಓದಿಗೆ ತೃಪ್ತಿ ಹೊಂದುತ್ತಿದ್ದೇವೆ. ನನ್ನ ಈ ಚಿಕ್ಕ ಪ್ರಯತ್ನವೇ ಕನಕದಾಸರು ಹಾಗೂ ಮೀರಾಬಾಯಿ ಸಾಹಿತ್ಯವನ್ನು ಓದುವುದರ ಜೊತೆಗೆ ಅವರನ್ನು ನಮ್ಮ ಮನಸ್ಸಿಗೆ ತಂದು ನೆಲೆಸುವುದು. ಅವರ ಸಾಹಿತ್ಯದ ತಾತ್ವಿಕ ಆಯಾಮಗಳನ್ನು ಚಿಂತನೆಗೆ ಒಳಪಡಿಸುವುದು. ಆಗ ಅವರು ನಮ್ಮ ಕನಕದಾಸರು, ನಮ್ಮ ಮೀರಾಬಾಯಿ ಆಗಲು ಸಾಧ್ಯ.

ಇವರಿಬ್ಬರ ಕೀರ್ತನೆ, ಭಜನೆಗಳನ್ನು ಓದಿದಾಗ ಮೇಲ್ನೋಟಕ್ಕೆ ಭಕ್ತಿಭಾವ, ಹರಿಭಕ್ತಿ, ಭಕ್ತಿಯ ನಾನಾ ಮುಖಗಳನ್ನು ಕಾಣುತ್ತೇವೆ. ಇವರಿಬ್ಬರ ಕೀರ್ತನೆ, ಭಜನೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಇನ್ನೂ ಹಲವಾರು ಸಾದೃಶ್ಯ ಹಾಗೂ ಸಾಮ್ಯತೆಯ ಅಂಶಗಳು ಕಂಡುಬರುತ್ತವೆ. ಕೀರ್ತನೆಗಳನ್ನು ಹಾಡುತ್ತ, ಭಜನೆಗಳನ್ನು ಪಠಿಸುತ್ತಿದ್ದರೆ ಅವುಗಳ ಅರ್ಥಸ್ವರೂಪಗಳ ಜೊತೆಯಲ್ಲಿ ನಮ್ಮ ಭಾವಗಳು ಅರಳಿ ನಿಲ್ಲುತ್ತವೆ. ಕನಕದಾಸರ ಕೀರ್ತನೆಗಳನ್ನು, ಮೀರಾಬಾಯಿಯ ಪದಗಳನ್ನು ಕೆಲವು ಉಪಶೀರ್ಷಿಕೆಯಾಗಿ ವಿಂಗಡಿಸಿ ಅವುಗಳಲ್ಲಿ ಅಡಗಿದ ತಾತ್ವಿಕ ಆಯಾಮಗಳನ್ನು ನೋಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಉದಾಹರಣೆಗೆ: ಹರಿಭಕ್ತಿ, ಭಕ್ತಿಭಾವ, ಸತತ ಹರಿನಾಮ ಸ್ಮರಣೆ, ಸಮರ್ಪಣಾ ಭಾವ,

ಪವಾಡ ಸದೃಶ್ಯತೆ, ಆಧ್ಯಾತ್ಮ ಜೊತೆಗೆ ಬದುಕಿನ ಪಾಠ, ಹರಿ ಸ್ಮರಣೆಯ ನಾನಾ ಹೆಸರುಗಳು, ಸಾಮಾಜಿಕ ಬಂಡಾಯ, ಪ್ರೇಮ ಭಕ್ತಿ ಹಾಗೂ ಭಕ್ತಿ ಮಾರ್ಗ ಮುಂತಾದವುಗಳು.

- **ಹರಿಭಕ್ತಿ**

ಕನಕದಾಸ ಮತ್ತು ಮೀರಾಬಾಯಿ ಇಬ್ಬರೂ ಹರಿಭಕ್ತಿ ಪ್ರಿಯರು. ತಮ್ಮ ಕೀರ್ತನೆ ಮತ್ತು ಪದಗಳಲ್ಲಿ ಹರಿಭಕ್ತಿಯನ್ನೇ ವ್ಯಕ್ತಪಡಿಸಿರುವರು. ಸದಾ ಹರಿಗಾಗಿ ತವಕಿಸಿದ ಜೀವಗಳಿವು.

ಕನಕದಾಸರು "ಏನೂ ಒಲ್ಲೆ ಶ್ರೀ ಹರಿ ನಿನ್ನ ಸ್ತುತಿಸಿ ಕೇಳೋದು
ಜ್ಞಾನಭಕ್ತಿ ಕೊಡು ನಮಗದೊಂದೇ ದೊಡ್ಡದು"

ಇದೇ ಮಾತಿನ ಅರ್ಥವನ್ನು ಮೀರಾಳಲ್ಲಿಯೂ ಕಾಣುತ್ತೇವೆ.

"ಜಬಸೇ ತೇ ಮೇಹಿ ನಂದನಂದನ
ದೃಷ್ಟಿ ಪಡ್ಯೋಮಾಈ ।
ತಬ ಪರಲೋಕ ಲೋಕ ಕಛುನ ಸುಹಾಈ ॥"

ಯಾವಾಗ ನನಗೆ ಕೃಷ್ಣ ದರ್ಶನವಾಯಿತೋ ಅಂದಿನಿಂದ ನನಗೆ ಇಹಪರಗಳೆರಡರಲ್ಲೂ ಇನ್ನಾವದೂ ಬೇಡವಾಗಿದೆ.

ತಾವು ಹರಿಯನ್ನು ನೆನೆಯುವುದರ ಜೊತೆಗೆ ಇತರರಿಗೂ ಹರಿಭಕ್ತಿಯನ್ನು ಸಾರಿದರು ಕನಕದಾಸರು.

"ನೆಚ್ಚದಿರು ಸಂಸಾರ ನೆಲೆಯಲ್ಲವೀ ಕಾಯ
ಅಚ್ಚುತನ ನಾಮವನು ನೆನೆದು ಸುಖಿಯಾಗೋ" ಎಂದಿದ್ದಾರೆ.

ಮೀರಾಬಾಯಿಯು "ಪ್ರಭುವೇ ಬೇಗ ನಿನ್ನ ದರ್ಶನ ನೀಡಿ, ನನ್ನ ಅಂತರ್ ವ್ಯಥೆಯನ್ನು ದೂರ ಮಾಡು" ಎಂದು ಕಳಕಳಿಯಿಂದ ಕೇಳುವಳು. "ನಾನು ಪಂಚರಂಗಿ ಚೋಲಿಯನ್ನು ತೊಟ್ಟು, ಆಟವಾಡಲು ಹೋಗುತ್ತೇನೆ. ಈ ಆಟದಲ್ಲಿ ಕೃಷ್ಣನಿಗೆ ತನು–ಮನ ಸಮಸ್ತವನ್ನು ನೀಡಿ ಬಿಟ್ಟಿದ್ದೇನೆ. ದೂರ ದೇಶದಲ್ಲಿರುವ ಅವನಿಗೆ ಅನೇಕ ಯುವತಿಯರು ಪತ್ರ ಬರೆದು ಕೇಳುತ್ತಾರೆ. ಆದರೆ ನನ್ನ ಪ್ರಿಯತಮನು ನನ್ನ ಹೃದಯದಲ್ಲೇ ನೆನೆಸಿರುವುದರಿಂದ ನಾನೇನೂ ಅವನನ್ನು ಬೇರೆಡೆಗೆ ಹುಡುಕಬೇಕಾದ ಅವಶ್ಯಕತೆ ಇಲ್ಲ" ಎಂದು ಮೀರಾಬಾಯಿಯು ತನ್ನ ಹರಿಭಕ್ತಿ ನಿಷ್ಠೆಯನ್ನು ತೋರಿದ್ದಾಳೆ.

"ನಮ್ಮ ತಂದೆ ಬಾಡದಾದಿ ಕೇಶವನ ಸ್ಮರಣೆಯ ಬಿಡಬಾರದು". "ಹರಿಭಕ್ತಿ ಇಲ್ಲದವನಿಗೆ ಪರಲೋಕ ಉಂಟೆ?" ಎಂದು ಕೇಳುವ ಕನಕದಾಸರು ಹರಿಭಕ್ತಿಯನ್ನು ಬಿಡದಂತೆ ಎಚ್ಚರಿಸುತ್ತ, ಹರಿಭಕ್ತಿಯಿಂದ ಮುಕ್ತಿ ಸಾಧ್ಯವೆಂದು ಸಾರುವರು.

- **ಭಕ್ತಿಭಾವ**

ಭಕ್ತಿಯ ಭಾವದ ಮುಂದಿನ ಭಾಗವೇ ಹರಿಭಕ್ತಿ ಭಾವ. ಹರಿಭಕ್ತಿ ಹಾಗೂ ಭಕ್ತಿ ಭಾವವೂ ಒಂದೇ ನಾಣ್ಯದ ಎರಡು ಮುಖಗಳು. ಕನಕದಾಸರು ಹಾಗೂ ಮೀರಾಬಾಯಿಯಲ್ಲಿ ಇಬ್ಬರಲ್ಲಿಯೂ ಭಕ್ತಿಭಾವದ ಪರಾಕಾಷ್ಠತೆಯನ್ನು ಕಾಣುತ್ತೇವೆ. ಸತತ ಹರಿಭಕ್ತಿ ಭಾವ ಹೊಂದಿದ ಕನಕದಾಸರ ಹಾಗೂ ಮೀರಾಬಾಯಿಯ ಸಾಹಿತ್ಯದಲ್ಲಿ ಭಕ್ತಿಭಾವದ ಛಾಯೆಯು ದಟ್ಟವಾಗಿ ಕಾಣುವದು.

ಕನಕದಾಸರು "ದೇವರಿಲ್ಲದ ಗುಡಿಯು ಪಾಳು ಬಿದ್ದಂಗಡಿಯು
ಭಾವವಿಲ್ಲದ ಭಕುತಿ ಅದು ಕುಹಕ ಯುಕುತಿ"

ಎಂದಿದ್ದಾರೆ. ಭಕ್ತಿಭಾವಕ್ಕೆ ಮಹತ್ವ ನೀಡಿದ ಕನಕದಾಸರು ಭಕ್ತಿಭಾವದಿಂದಾಗುವ ಲಾಭವನ್ನು ಹೇಳಿದ್ದಾರೆ.

"ಉನ್ನತ ಕಾಗಿನೆಲೆಯಾದಿ ಕೇಶವನ ಧ್ಯಾನವನು

ಮನಮುಟ್ಟಿ ಮಾಡುವುದು ಮುಕ್ತಿಗಾಗಿ ಆನಂದಕ್ಕಾಗಿ ॥"

ಮುಕ್ತಿ, ಆತ್ಮಾನಂದಕ್ಕೆ ಭಕ್ತಿಭಾವವೇ ಕಾರಣ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಮೀರಾಬಾಯಿ "ಛೋಡ ಮತ ಜಾಜ್ಯೋ ಜೀ ಮಹಾರಾಜ
ಮ್ಹಾ ಅಬಲಾ ಬಲ ಮ್ಹಾರೋ ಗಿರಿಧರ
ಥೇ ಮ್ಹಾರೋ ಸರತಾಜ ।"

ಹೇ ಪ್ರಿಯತಮ ಕೃಷ್ಣ, ನೀನು ನನ್ನನ್ನು ಬಿಟ್ಟು ಹೋಗದಿರು. ಅಬಲೆಯಾದ ನನಗೆ ನೀನೇ ಆಧಾರ ಎಂದು ಭಕ್ತಿಭಾವದಿಂದ ತನ್ನ ಸಶಕ್ತಿ ಕೃಷ್ಣನೇ ಎಂಬುದನ್ನು ಒಪ್ಪಿಕೊಂಡಿರುವರು. ನಿನ್ನ ಬರವಿನಿಂದ ನನಗೆ ಹರ್ಷ ದೊರೆಯುತ್ತದೆ ಎಂದು ಮೀರಾ ತನ್ನ ಭಕ್ತಿಭಾವ ಮೆರೆದಿದ್ದಾಳೆ.

"ಪೃಥಿಯೊಳು ಕಾಗಿನೆಲೆಯಾದಿ ಕೇಶವ ನಿನ್ನ
ಭಕ್ತಿ ಇಲ್ಲದ ನನಗೆ ಮುಕ್ತಿಯುಂಟೇ?"

ಎಂದು ಪ್ರಶ್ನಿಸುವ ಕನಕದಾಸರು ಭಕ್ತಿಯಿಂದ ಮಾತ್ರ ನರನಿಗೆ ಮುಕ್ತಿ ಎಂದಿದ್ದಾರೆ. ಮುಕ್ತಿ ತಲುಪಲು ಭಕ್ತಿಭಾವ ಬೇಕೇ ಬೇಕು ಎಂಬುದನ್ನು ಇವರಿಬ್ಬರ ಭಜನೆ, ಕೀರ್ತನೆಗಳು ನುಡಿಯುತ್ತಿವೆ.

- **ಸತತ ಹರಿನಾಮ ಸ್ಮರಣೆ**

ಕನಕದಾಸರು ವೈಷ್ಣವ ಪಂಥವನ್ನು ಅನುಸರಿಸಿದರೆ, ಮೀರಾಬಾಯಿ ಕೂಡಾ ವೈಷ್ಣವ ಸಂಪ್ರದಾಯಸ್ಥಳು. ಹೀಗಾಗಿ ಇವರಿಬ್ಬರೂ ತಮ್ಮ ಕೀರ್ತನೆ, ಭಜನೆಗಳಲ್ಲಿ ಸತತವಾಗಿ ಹರಿಸ್ಮರಣೆಯನ್ನು ಮಾಡಿದ್ದಾರೆ.

ಕನಕದಾಸರು "ಆರಿಗಾರಿಲ್ಲ ಆಪತ್ಕಾಲದೊಳಗೆ
ವಾರಿಜಾಕ್ಷನ ನಾಮ ನೆನೆ ಕಂಡ್ಯ ಮನವೆ"

ಮನಸ್ಸಿಗೆ ಸತತವಾಗಿ ಹರಿಯನ್ನು ನೆನೆಯಲು ಹೇಳುವರು.

"ಆರು ಬಾಳಿದರೇನೂ ಆರು ಬದುಕಿದರೇನೂ
ನಾರಾಯಣನ ಸ್ಮರಣೆ ನಮಗಿಲ್ಲದನಕ"

ನಾರಾಯಣನ ಸ್ಮರಣೆಯ ಪ್ರಾಮುಖ್ಯವನ್ನು ಎತ್ತಿ ಹೇಳಿರುವರು.

ಮೀರಾಬಾಯಿ "ಮೀರಾದಾಸಿ ಅರಜಾಂ ಕರತಾ,
ಮ್ಹಾರೋ ಸಹಾರೋ ಣಾ ಅಣ ॥"

ಸ್ವಾಮಿ! ನಿನ್ನ ಹೊರತು ನನಗಾರೂ ಇಲ್ಲ. ನೀನೇ ನನಗೆ ಪರಮಗತಿ, ಪರಮ ಆಶ್ರಯ ಎಂದು ಕೊಂಡಾಡಿದ್ದಾರೆ. ಮೀರಾಬಾಯಿ ಪ್ರತಿ ದಿನ, ಪ್ರತಿ ಕ್ಷಣವೂ ಹರಿಯನ್ನೇ ನೆನೆಯುವರು. ಮೀರಾ ಒಂದೆಡೆ, "ಯೋಗಿನಿಯಾಗಿ ನಾನು ತಿರುಗುತ್ತಾ ಒಡೆಯನನ್ನು ಅರಸುತ್ತಿದ್ದೇನೆ. ನಾನು ನನ್ನ ದೊರೆಯ ಜತೆಗೆ ಬಾಳಲಿಚ್ಛಿಸುತ್ತೇನೆ. ಶ್ರಾವಣದಲ್ಲಿ ಬರುತ್ತೇನೆ ಎಂದು ಹೇಳಿಹೋದ ನನ್ನ ಸ್ವಾಮಿಯು ಕೊಟ್ಟ ವಚನವನ್ನೇ ಮರೆತಂತಿದೆ. ಅವನ ಬರುವ ದಿನಗಳನ್ನೆಣಿಸಿ ಎಣಿಸಿ ನನ್ನ ಹಸ್ತದ ರೇಖೆಗಳೇ ಮಾಸಿ ಹೋಗಿವೆ. ಹೇ ಪ್ರಿಯತಮ! ನಾನು ಕೃಶಳಾಗಿ ಹೋಗಿದ್ದೇನೆ. ನಾನಿನ್ನು ನಿನಗಾಗಿ ನವೀನ ವೇಷಧರಿಸಿ ದಾರಿ ಕಾಯುತ್ತಲಿದ್ದೇನೆ" ಎಂದು ಮುಕ್ತವಾಗಿ ತನ್ನ ಮನದಾಳದ ಭಾವವನ್ನು ತೆರೆದಿಟ್ಟು ಹರಿಯನ್ನು ಸತತವಾಗಿ ನೆನೆಯುವಳು.

"ತಲ್ಲಣಿಸದಿರು ಕಂಡ್ಯ ತಾಳು ಮನವೆ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ"

ಸತತ ಹರಿನಾಮ ಸ್ಮರಣೆಯಿಂದ "ಕಾಗಿನೆಲೆಯಾದಿ ಕೇಶವರಾಯ ಎಲ್ಲರನ್ನು ಸಲಹುವನು ಇದಕೆ ಸಂಶಯವಿಲ್ಲ" ಎಂದು ಕನಕದಾಸರು ಹೇಳಿದ್ದಾರೆ. ಒಟ್ಟಾರೆಯಾಗಿ ಕನಕದಾಸರಲ್ಲಿ ಹಾಗೂ ಮೀರಾಬಾಯಿಯವರಲ್ಲಿ ಹರಿನಾಮ ಸ್ಮರಣೆಯೇ ಮೂಡಿಬಂದಿದೆ.

- **ಸಮರ್ಪಣಾ ಭಾವ**

ಕನಕದಾಸರು ಹಾಗೂ ಮೀರಾಬಾಯಿ ಇಬ್ಬರೂ ಲೌಕಿಕ ಇಹ ಆಸೆಯ ತೊರೆದು ದೇವನ ಸ್ಮರಣೆಯೊಂದಿಗೆ ದೈವಭಕ್ತಿಯಿಂದ ದೈವಕ್ಕೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡವರು. ಕನಕವನ್ನು ತೊರೆದು ಹರಿಯನ್ನು ಕನಕದಾಸರು ಅರಸಿದರೆ, ಭೋಜರಾಜನನ್ನು ತೊರೆದು ಶ್ರೀಕೃಷ್ಣನನ್ನು ಹುಡುಕಿದಳು ಮೀರಾಬಾಯಿ. ಇಬ್ಬರೂ ಸಮರ್ಪಣಾ ಭಾವ ಹೊಂದಿದವರು. ಇತರರಲ್ಲಿಯೂ ಆ ಭಾವ ಮೂಡುವಂತೆ ಮಾಡಿದವರು.

ಕನಕದಾಸರು "ಕಾಗಿನೆಲೆ ಆದಿಕೇಶವನೆ ನಾಗಶಯನ–
ನಾಗಿರಲು ಬೇರೊಂದನರಸ ಲೇತಕೆ ॥"

ಎಂದು ಕಾಗಿನೆಲೆಯಾದಿ ಕೇಶವನಿಗೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡವರು.

"ದುರ್ಜನರ ಸಂಗ ಎಂದಿಗೊಲ್ಲೆನು ಹರಿಯೆ ಇಂಥ
ಸಜ್ಜನರ ಸಂಗದೊಳಗಿರಿಸೆನ್ನ ರಂಗ"

ಎಂದು ಸಮರ್ಪಣಾ ಭಾವದ ಜೊತೆಯಲ್ಲಿ ತನ್ನ ಬೇಡಿಕೆಯ ಭಾವವನ್ನು ಹೊರಹಾಕಿದವರು.

"ಮೀರಾ ಕೇ ಪ್ರಭು ಗಿರಿಧರನಾಗರ
ಬಾರ ಬಾರ ಬಲಿ ಜಾಊಂ ॥"

ನನ್ನ ಸ್ವಾಮಿಯು ಗಿರಿಧರನಾಗರನು. ನಾನು ಕ್ಷಣ ಕ್ಷಣ ಅವನಲ್ಲಿ ಸಮರ್ಪಿಸಿಕೊಳ್ಳುತ್ತೇನೆ ಎಂದು ಸದಾ ಶ್ರೀಕೃಷ್ಣನಿಗಾಗಿ ಕ್ಷಣ ಕ್ಷಣವೂ ಮಿಡಿಯುವ ಮನಸ್ಸನ್ನು ತೆರೆದಿಟ್ಟಿರುವಳು ಮೀರಾಬಾಯಿ.

"ಮೀರಾ ಕೇ ಪ್ರಭು ಸದಾ ಸಹಾಈ,
ರಾಖೇ ವಿಘನ ಹಟಾಯ ।
ಭಜನ ಭಾವ ಮೇ ಮಸ್ತ ಡೋಲತೀ,
ಗಿರಿಧರ ಪೇ ಬಲಿ ಜಾಯೆ ॥"

ಪ್ರಭು ಕೃಷ್ಣನು ಯಾವಾಗಲೂ ನನ್ನನ್ನು ವಿಘ್ನಗಳಿಂದ ರಕ್ಷಿಸುತ್ತಾನೆ. ಅಂತೆಯೇ ನಾನವನನ್ನು ಭಜಿಸುತ್ತ ನನ್ನದೆಲ್ಲವನ್ನೂ ಸಮರ್ಪಿಸಿದ್ದೇನೆ. ಮೀರಾಬಾಯಿ ಶ್ರೀಕೃಷ್ಣ ವಿಘ್ನರಕ್ಷಕ ಹಾಗೂ ನನ್ನದೆಲ್ಲವೂ ಅವನಿಗೆ ಸಮರ್ಪಣೆ ಎಂಬ ದೃಢತೆಯನ್ನು ದೃಢಪಡಿಸಿರುವಳು.

"ಮೀರಾ ಕೇ ಪ್ರಭು ಹರಿ ಅಬಿನಾಸೀ
ದೇಸ್ಯೂಂ ಪ್ರಾಣ ಅಂಕೋರ ॥"

ಪ್ರಭು ನೀನು ಅವಿನಾಶಿಯು. ನಿನಗಾಗಿ ನನ್ನ ಪ್ರಾಣ ಸಮಸ್ತವನ್ನೂ ಸಮರ್ಪಿಸಿಬಿಟ್ಟಿದ್ದೇನೆ ಎಂದು ಮೀರಾ ಹೇಳುವಳು.

"ತೀರ್ಥಯಾತ್ರೆಗೆ ಪೋಗಿ ತಿರುತಿರುಗಿ ಬಳಲಿ ಕೃ–
ತಾರ್ಥನಾದೆನು ಎಂಬ ಘನತೆ ಬೇಡ
ಪಾರ್ಥಸಾರಥಿ ಕಾಗಿನೆಲೆಯಾದಿಕೇಶವನ

ಸಾರ್ಥಕದಿ ಭಜಿಸಿ ಸುಖಿಯಾಗು ಮನುಜ ॥"

ಕನಕದಾಸರು ತೀರ್ಥಯಾತ್ರೆಯ ನಿರರ್ಥಕತೆಯನ್ನು ಹೇಳಿ ಕಾಗಿನೆಲೆಯಾದಿಕೇಶವನಲ್ಲಿ ಸಾರ್ಥಕ ಭಾವ ಅಂದರೆ ಸಮರ್ಪಣಾ ಭಾವದಿಂದ ಆತನನ್ನು ಭಜಿಸಿ ಸ್ತುತಿಸಿದಾಗ ಮಾತ್ರ ಸುಖ, ಆತ್ಮಾನಂದ ದೊರೆಯುವದು ಎಂದು ಹೇಳಿರುವರು. ಒಟ್ಟಾರೆಯಾಗಿ ಕನಕದಾಸರ, ಮೀರಾಬಾಯಿಯವರಲ್ಲಿ ಸಮರ್ಪಣಾ ಭಾವದ ಕುರುಹುಗಳಿಗೆ ಮೇಲಿನ ಕೀರ್ತನೆ, ಭಜನೆಗಳೇ ಸಾಕ್ಷಿಯಾಗಿವೆ.

- **ಪವಾಡ ಸದೃಶ್ಯತೆ**

ಮಹಾತ್ಮರ ಸಂತರ ಜೀವನದಲ್ಲಿ ಪವಾಡಗಳು ಕಂಡು ಬರುತ್ತವೆ. ಕನಕದಾಸರ ಹಾಗೂ ಮೀರಾಬಾಯಿಯವರ ಜೀವನದಲ್ಲಿ ಪವಾಡಗಳು ಘಟಿಸಿವೆ.

ಕನಕದಾಸರು ಶ್ರೀಕೃಷ್ಣನ ದರ್ಶನದ ಹಂಬಲದಿಂದ ಉಡುಪಿಗೆ ಬಂದರು. ಅಲ್ಲಿ ಉನ್ನತ ಕುಲದವರಿಗೆ, ಬ್ರಾಹ್ಮಣರಿಗೆ ಮಾತ್ರ ಗುಡಿ ಪ್ರವೇಶ ದೊರೆಯುತ್ತಿತ್ತು. ಕನಕದಾಸರಿಗೆ ಇದರಿಂದಾಗಿ ಶ್ರೀಕೃಷ್ಣನ ದರ್ಶನ ಭಾಗ್ಯ ಲಭಿಸಲಿಲ್ಲ. ಶ್ರೀವಾದಿರಾಜ ಶ್ರೀಪಾದಂಗಳ ಪರವಾಗಿ ಪರ್ಯಾಯಶ್ರೀಗಳು ಶ್ರೀಕೃಷ್ಣನಿಗೆ ಅಲಂಕಾರ ಮಾಡಿ ಸಹಸ್ರಾರ್ಚನೆಯನ್ನು ನಡೆಸುತ್ತಿದ್ದಾರೆಂದು ಕನಕದಾಸರಿಗೆ ತಿಳಿದುಬಂದಿತು. ಈ ಸುದ್ದಿ ಕೇಳಿ ಈಗಲಾದರೂ ಶ್ರೀಕೃಷ್ಣನ ದರ್ಶನ ದೊರೆಯಬಹುದೆಂದು ಹಂಬಲಿಸಿ ದೇವಾಲಯದ ಸುತ್ತಲೂ ಅಲೆದಾಡಿದರೂ ಎಲ್ಲಿಯೂ ಪ್ರವೇಶ ದೊರೆಯಲಿಲ್ಲ. ದರ್ಶನ ಭಾಗ್ಯವೂ ಲಭಿಸಲಿಲ್ಲ. ಇದರಿಂದ ಕನಕದಾಸರು ಅಪಾರವಾಗಿ ನೊಂದುಕೊಂಡರು.

ಗುಡಿಯೊಳಗೆ ಅಲಂಕಾರ, ಪೂಜೆ, ಮಂಗಳಾರತಿಗಳು, ವೇದ, ಮಂತ್ರ ಘೋಷಗಳು ಸತತವಾಗಿ ಮೊಳಗತೊಡಗಿದವು. ಕನಕದಾಸರು ನಿರಾಶೆಯಿಂದ ಪಶ್ಚಿಮಭಾಗದ ಗುಡಿಯ ಹಿಂಭಾಗಕ್ಕೆ ಬಂದು ನಿಂತು ಶ್ರೀಕೃಷ್ಣ ದರ್ಶನಕ್ಕಾಗಿ ನಿರಂತರವಾಗಿ ಪ್ರಾರ್ಥಿಸಿದರು. ಕನಕದಾಸರ ಪ್ರಾರ್ಥನೆಯ ಕೂಗು ಕೇಳಿದ ಶ್ರೀಕೃಷ್ಣನು ಒಮ್ಮಿಂದೊಮ್ಮೆಲೇ ಪೂರ್ವಾಭಿಮುಖದಿಂದ ಪಶ್ಚಿಮಾಭಿಮುಖಕ್ಕೆ ತಿರುಗಿ, ಗುಡಿಯ ಹಿಂಬದಿಯ ಕಿಂಡಿಯಲ್ಲಿ ಕನಕದಾಸರಿಗೆ ಶ್ರೀಕೃಷ್ಣನು ದರ್ಶನ ಕೊಟ್ಟನು. ಮುಂದೆ ಈ ಕಿಂಡಿ 'ಕನಕನ ಕಿಂಡಿ' ಎಂದು ಪ್ರಸಿದ್ಧಿ ಪಡೆಯಿತು. ಶ್ರೀಕೃಷ್ಣನ ದರ್ಶನದಿಂದ ಪುನೀತರಾದ ಕನಕದಾಸರು ನಲಿದಾಡಿದರು.

ಕನಕದಾಸರು ತಮ್ಮ ಮುಪ್ಪಿನ ದಿನಗಳಲ್ಲಿ ಕಾಗಿನೆಲೆಯಲ್ಲಿ ಬಂದು ನೆಲೆಸಿದರು. ಇವರು ಸದಾ ಆದಿಕೇಶವನ ಸನ್ನಿಧಾನದಲ್ಲೇ ಕಾಲ ಕಳೆಯುತ್ತಿದ್ದರು. ತಮ್ಮ ಕೊನೆಯ ದಿನಗಳಲ್ಲಿ ಶ್ರೀ ಆದಿಕೇಶವನಿಗೆ ಏಕಾಂತ ಸೇವೆಯನ್ನು ಅರ್ಪಿಸಲು ಗರ್ಭಗುಡಿಗೆ ತೆರಳಿ ಬಾಗಿಲನ್ನು ಹಾಕಿಕೊಂಡರು. ಬಹಳ ಸಮಯವಾದರೂ ಕನಕದಾಸರು ಬಾಗಿಲು ತೆರೆಯಲಿಲ್ಲ. ಕೊನೆಗೆ ಅರ್ಚಕರೇ ಧೈರ್ಯ ಮಾಡಿ ಗರ್ಭ ಗುಡಿಯ ಬಾಗಿಲನ್ನು ತೆರೆದಾಗ ಕನಕದಾಸರು ಅಲ್ಲಿರಲಿಲ್ಲ, ಆದರೆ ಶ್ರೀ ಆದಿಕೇಶವನ ಪಾದದಡಿಯಲ್ಲಿ ಕನಕದಾಸರ ಚಿಕ್ಕ ವಿಗ್ರಹವೊಂದು ಮಾತ್ರ ಕಾಣಿಸಿಕೊಂಡಿತು. ಶ್ರೀ ಕಾಗಿನೆಲೆಯಾದಿಕೇಶವನ ಪಾದದಡಿಯಲ್ಲಿಯೇ ಅದೃಶ್ಯರಾಗಿ, ತಮ್ಮ ಭಕ್ತರಿಗಾಗಿ ಚಿಕ್ಕ ವಿಗ್ರಹ ರೂಪದಲ್ಲಿದ್ದಾರೆಂದು ಇಂದಿಗೂ ಭಕ್ತರಲ್ಲಿ ನಂಬಿಕೆ ಇದೆ. ನಿತ್ಯವೂ ಆದಿಕೇಶವರಾಯನ ಪೂಜೆಯ ಜೊತೆಗೆ ಕನಕದಾಸರ ವಿಗ್ರಹಕ್ಕೂ ಪೂಜೆ ಸಲ್ಲುವುದು.

ಮೀರಾಳ ಹಾಡನ್ನು ಅಕ್ಬರ್ ಕೇಳಿ ಅಮೂಲ್ಯವಾದ ಹಾರ ನೀಡಿದಾಗ ಪತಿಯಾದ ಭೋಜರಾಜನು ಕೋಪಗೊಂಡು ಅಸಹನೆಯಿಂದ ನದಿಯಲ್ಲಿ ಮುಳುಗಿ ಸಾಯುವಂತೆ ಮೀರಾಳಿಗೆ ಆಜ್ಞಾಪಿಸಿದನು. ಮೀರಾ ನದಿಯಲ್ಲಿ ಮುಳುಗುವಾಗ ಸ್ವತಃ ಶ್ರೀಕೃಷ್ಣನೇ ಅವಳನ್ನು ರಕ್ಷಿಸಿ "ನೀನಿನ್ನು ಸ್ವತಂತ್ರಳು" ಎಂದು ಹೇಳಿದನಂತೆ. ಮೀರಾ ಶ್ರೀಕೃಷ್ಣನ ಭಕ್ತೆಯಾಗಿರುವುದು ಅವಳ

ಬಂಧುಗಳಿಗೆ ಇಷ್ಟವಿರಲಿಲ್ಲ. ಆಗಾಗ ಮೀರಾಳನ್ನು ಕೊಲ್ಲುವ ಪ್ರಯತ್ನಗಳಾದರೂ ಶ್ರೀಕೃಷ್ಣನ ಕೃಪೆ ಹಾಗೂ ಮಹಿಮೆಯಿಂದ ಮೀರಾಳು ಸಾವು–ಕಷ್ಟ–ಸಂಕಟಗಳನ್ನು ಗೆದ್ದು ನಿಂತಳು.

ರಾಣಾನು ಒಮ್ಮೆ ಮೀರಾಬಾಯಿಗೆ ಬುಟ್ಟಿಯಲ್ಲಿ ಹಾವನ್ನು ಕಳುಹಿಸಿದನು. ಮೀರಾ ಹಾವನ್ನು ಕೈಯಲ್ಲಿ ಹಿಡಿದಾಗ ಅದು ಸಾಲಿಗ್ರಾಮ ರೂಪ ಪಡೆಯಿತು. ಅಮೃತವೆಂದು ರಾಣಾ ವಿಷವನ್ನು ಕೊಟ್ಟಾಗ ಮೀರಾ ವಿಷವನ್ನು ಮುಟ್ಟಿದಾಗ ಅದು ನಿಜಕ್ಕೂ ಅಮೃತವಾಯಿತು. ರಾಣಾ ಮುಳ್ಳಿನ ಮಂಚವನ್ನು ಕಳುಹಿಸಿದನು, ಮುಳ್ಳಿನ ಹಾಸಿಗೆಯ ಮೇಲೆ ಮೀರಾ ಮಲಗಿದಾಗ ಅದು ಹೂವಿನ ಹಾಸುಗೆಯಾಯಿತು. ಶ್ರೀಕೃಷ್ಣ ಜನ್ಮಾಷ್ಟಮಿಯೆಂದು ಮೀರಾ ಬೃಂದಾವನದಲ್ಲಿ ಭಕ್ತಿ ಗೀತೆ ಹಾಡಿ ನಲಿದಳು. ಮೀರಾಳ ಭಜನೆಗಳಾದ 'ಮೇರೆ ಜನನ ಮರಣ ಕೇ ಸಾಥಿ', 'ಮೇರೆ ತೋ ಗಿರಿಧರ ಗೋಪಾಲ', ಹಾಡುಗಳು ಎಲ್ಲರ ಮನಸ್ಸನ್ನು ಗೆದ್ದವು. ಮೀರಾ 'ಗಿರಿಧರ ನನ್ನನ್ನು ಕರೆಯುತ್ತಿದ್ದಾನೆ' ಎಂದು ವಿಗ್ರಹದ ಮುಂದೆ ಉರುಳಿದಳು. ಗರ್ಭಗುಡಿಯ ಬಾಗಿಲುಗಳು ತಂತಾನೇ ಮುಚ್ಚಿಕೊಂಡವು. ಕೆಲವು ಸಮಯದ ಬಳಿಕ ಬಾಗಿಲು ತೆರೆದು ನೋಡಿದರೆ ಮೀರಾಳ ದೇಹ ಅಲ್ಲಿರಲಿಲ್ಲ. ಅವಳುಟ್ಟಿದ್ದ ಸೀರೆ ವಿಗ್ರಹವನ್ನು ಆವರಿಸಿತ್ತು.

ಕನಕದಾಸ ಹಾಗೂ ಮೀರಾಳ ಕೊನೆಗಾಲದ ಘಟನೆ ದೇವನಲ್ಲಿ ಅವರ ಐಕ್ಯತೆಯ ಐತಿಹ್ಯಗಳು ಒಂದೇ ಆಗಿರುವುದು ಸೋಜಿಗವನ್ನುಂಟು ಮಾಡುತ್ತದೆ.

- **ಆಧ್ಯಾತ್ಮದ ಜೊತೆಗೆ ಬದುಕಿನ ಪಾಠ**

ಭಾರತೀಯ ಸಾಹಿತ್ಯದ ಉದ್ದೇಶವನ್ನು ಅವಲೋಕಿಸಿದಾಗ ಕೇವಲ ಸಾಹಿತ್ಯಕ್ಕಾಗಿ ಸಾಹಿತ್ಯ ರಚನೆಯಾಗಿಲ್ಲ. ಸಾಹಿತ್ಯ ರಚನೆಯ ಜೊತೆಗೆ ಸಾಮಾಜಿಕ ಕಳಕಳಿ, ಕಾಳಜಿ, ವೈಯಕ್ತಿಕ ಬದುಕಿನ ಮೌಲ್ಯಗಳನ್ನು ಪರಿಗಣಿಸಿರುವರು. ಇದರಂತೆ ಕನಕದಾಸರು ಹಾಗೂ ಮೀರಾಬಾಯಿಯವರು ಸಾಮಾಜಿಕ ಡೊಂಕುಗಳನ್ನು ತಿದ್ದಿದವರು. ವೈಯಕ್ತಿಕ ಬದುಕು ಕತ್ತಲಾದ ವ್ಯಕ್ತಿಗಳಿಗೆ ತಮ್ಮ ಅನುಭವದ ಸಾರದ ಬೆಳಕು ಬೀರಿದರು. ಸಾಮಾಜಿಕ ಸ್ವಾಸ್ಥ್ಯ ಹಾಗೂ ಮೌಲ್ಯಯುತ ಬದುಕಿನ ಜೊತೆಗೆ ಭಕ್ತಿಮಾರ್ಗ ತೋರಿಸಿ ಅವರಿಗೂ ಮುಕ್ತಿಯೆಡೆಗೆ ಸಾಗಲು ಹುರಿದುಂಬಿಸಿದರು.

ಕನಕದಾಸರು "ಈ ಸಿರಿಯ ನಂಬಿ ಹಿಗ್ಗಲು ಬೇಡ ಮನವೆ
ವಾಸುದೇವನ ಭಜಿಸೋ ಒರಟು ಜೀವನವೆ"

ಎಂದು ಸಿರಿಯ ನಿರರ್ಥಕತೆ, ದೇವನ ಭಜನೆಯ ಮಹತ್ವವನ್ನು ಸಾರಿದ್ದಾರೆ.

ಮೀರಾಬಾಯಿಯು "ಯೋ ಸಂಸಾರ ದೀಡರೋ ಕಾಂಟೋ
ಗೇಲ ಪ್ರೀತವು ಅಟಕಾಸ್ಯಾಂ ।"

"ಈ ಸಂಸಾರವು ಬೋರೆ ಗಿಡದ ಮುಳ್ಳಿನಂತೆ ಚುಚ್ಚುತ್ತಲಿದೆ". ಸಂಸಾರವನ್ನು ಬೋರೆ ಗಿಡದ ಮುಳ್ಳಿಗೆ ಹೋಲಿಸಿ ಅದರ ಯಾತನೆಯನ್ನು ಕಟ್ಟಿಕೊಟ್ಟಿರುವರು. ಕನಕದಾಸರು ಸಂಸಾರ ಕುರಿತು ಹೀಗೆ ಹೇಳಿದ್ದಾರೆ.

"ಏನು ಇಲ್ಲದ ಎರಡು ದಿನದ ಸಂಸಾರ
ಜ್ಞಾನದಲಿ ದಾನ–ಧರ್ಮವ ಮಾಡಿರಯ್ಯ"

ಸಂಸಾರದ ನಿರರ್ಥಕತೆ ಜೊತೆಯಲ್ಲಿ ದಾನ–ಧರ್ಮವ ಮಾಡಬೇಕೆಂಬ ಸಂದೇಶವನ್ನು ಸಾರಿದ್ದಾರೆ. ಎಂಥವರ ಸಂಗ ನಮ್ಮ ವ್ಯಕ್ತಿತ್ವಕ್ಕೆ ಬಹುಭಂಗ ಎನ್ನುವದನ್ನು ಕನಕರು ನಮಗೆ ಆದೇಶಿಸಿದ್ದಾರೆ.

"ಗುರುಸತಿಗೆ ಪರಸತಿಗೆ ಎರಡು ಎಣಿಪನ ಸಂಗ
ಗುರುನಿಂದೆ ಪರನಿಂದೆ ಮಾಳ್ಪನ ಸಂಗ
ಪರಹಿತಾರ್ಥದ ಧರ್ಮ ಪಡೆಯದಾತನ ಸಂಗ ಇಂಥ

ಪರಮಪಾಮರರ ಸಂಗ ಬಹುಭಂಗ ರಂಗ"

"ಯಾರಿಗಾರು ಬಹರು ಸಂಗಡ ಮುಂದೆ" ವಾಸ್ತವಿಕ ಸತ್ಯ ಮನವರಿಕೆ ಮಾಡಿಕೊಟ್ಟವರು ಕನಕದಾಸರು. ಧರೆಯ ಭೋಗವನ್ನು ನಿರಾಕರಿಸಲು ಹೇಳುವ ಇವರು ಅದನ್ನು ಕನಸಿಗೆ ಹೋಲಿಸಿದ ರೀತಿ, ಅದನ್ನು ನಾವೆಲ್ಲರೂ ಅರ್ಥೈಸಿಕೊಂಡಾಗ ಕನಕದಾಸರ, ಅನುಭಾವದ ಸಂದೇಶ ನಮಗೆ ಮನದಟ್ಟಾಗಲು ಸಾಧ್ಯ.

"ಧರೆಯ ಭೋಗವನ್ನು ನಂಬಿ
ಹರಿಯ ಮರೆದು ಕೆಡಲು ಬೇಡ
ಧರೆಯ ಭೋಗ ಕನಸಿನಂತೆ ಕೇಳು ಮಾನವ"

ಮೀರಾಬಾಯಿ "ಕಾಂಈ ಮ್ಹಾರೋ ಜಣಮ ಬಾರಂಬಾರ ।
ಪೂರಬಲಾ ಕೋಈ ಪುನ್ನ ಖೂಂಟ್ಯಾಂ, ಮಾಣಸಾ ಅವತಾರ ।
ಬಡಾ ಛಿಣ ಛಿಣ ಘಟ್ಯಾ ಪಲಪಲ, ಜಾತ ಣಾ ಕಛುಬಾರ ।
ಬಿರಛರಾಂ ಜೋಪಾತ ಟೂಟ್ಯಾ, ಲಾಯಾ ಣಾ ಫಿರ ಡಾರ ।
........................................................................"

"ಈ ಮಾನವ ಜನ್ಮ ಮತ್ತೆ ಮತ್ತೆ ಬರುವುದಿಲ್ಲ. ಪೂರ್ವ ಜನ್ಮದ ಪುಣ್ಯದಿಂದಲೇ ಮನುಷ್ಯ ಜನ್ಮವು ದೊರೆಯುತ್ತದೆ. ಈ ಜೀವನವು ಒಂದು ಗಳಿಗೆಗೆ ವೃದ್ಧಿಯಾಗುತ್ತದೆ ಮತ್ತೊಂದು ಗಳಿಗೆಯಲ್ಲಿ ನಾಶವಾಗುತ್ತದೆ. ಇದು ನಾಶವಾಗಲು ತಡವಾಗುವುದಿಲ್ಲ. ಮರದ ಎಲೆಯು ಒಮ್ಮೆ ಉದುರಿ ಬಿದ್ದರೆ ಮತ್ತೆ ಮರಕ್ಕೆ ಅಂಟಿಕೊಂಡು ಚಿಗಿಯಲಾರದು. ಇದೇ ರೀತಿ ಒಮ್ಮೆ ಸಿಕ್ಕ ಮಾನವ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳದಿದ್ದರೆ ಮತ್ತೊಮ್ಮೆ ಸಿಗಲಾರದು" ಎಂದು ಮಾನವ ಜನ್ಮದ ಕುರಿತು ಮೀರಾ ಹೇಳಿದ್ದಾರೆ. ಈ ರೀತಿಯಾಗಿ ಕನಕದಾಸರು ಹಾಗೂ ಮೀರಾಬಾಯಿಯವರು ಆಗಾಗ ಬದುಕಿನ ಪಾಠ ಹೇಳಿರುವುದನ್ನು ಅವರ ಕೀರ್ತನೆ, ಭಜನೆಗಳಲ್ಲಿ ಕಾಣುತ್ತೇವೆ.

- **ಹರಿ ಸ್ಮರಣೆಯ ನಾನಾ ಹೆಸರುಗಳು**

ಕನಕದಾಸರ ಆರಾಧ್ಯ ದೈವ ಕಾಗಿನೆಲೆಯಾದಿಕೇಶವ. ಮೀರಾಬಾಯಿ ಶ್ರೀಕೃಷ್ಣನ ಪರಮ ಭಕ್ತೆ. ಇವರಿಬ್ಬರ ಕೀರ್ತನೆ, ಪದಗಳನ್ನು ನೋಡುವಾಗ ತಮ್ಮ ಆರಾಧ್ಯ ದೇವರನ್ನು ಅನೇಕ ಹೆಸರಿನಿಂದ ಕರೆದು ತೃಪ್ತಿಪಟ್ಟಿರುವರು. ದೇವರನ್ನು ಕೊಂಡಾಡಿದ, ಸ್ತುತಿಸಿದ ಬಗೆಯನ್ನು ನಾವಿಲ್ಲಿ ನೋಡಬಹುದು.

ಕನಕದಾಸರು ಕಾಗಿನೆಲೆಯಾದಿಕೇಶವ, ವಾರಿಜಾಕ್ಷ, ನಾರಾಯಣ, ಆದಿಕೇಶವಮೂರ್ತಿ, ವಾಸುದೇವ, ಶ್ರೀಹರಿ, ಪಾರ್ಥಸಾರಥಿ, ನರಹರಿ, ಹರಿ, ರಂಗ, ಅಚ್ಯುತನಾಮ, ಕಂಸಾರಿ, ಮುಂತಾದ ಹೆಸರಿನಿಂದ ತಮ್ಮ ಆರಾಧ್ಯ ದೈವವನ್ನು ಆರಾಧಿಸಿದ್ದಾರೆ. ಮೀರಾಬಾಯಿ ಜೋಗಿ, ಹೇ ಗಿರಿಧರ ನಾಗರನೇ, ಕೃಷ್ಣ, ಮನಮೋಹನಾದ ಕೃಷ್ಣ, ಹೇ ಪ್ರಿಯತಮ ಕೃಷ್ಣ, ಹೇ ಕೃಷ್ಣ, ಪ್ರಭು ಕೃಷ್ಣ, ಶ್ರೀ ಕೃಷ್ಣ, ಹೇ ಪ್ರಿಯತಮ, ಹೇ ಯೋಗಿರಾಜ ಪ್ರಿಯತಮ, ಪ್ರಭು, ಒಡೆಯ, ಗೋವಿಂದ, ಹೇ ಗೋಪಾಲ, ಶಾಮ, ಶಾಮಸುಂದರ, ಮುರಾರಿ, ಹೇ ನಲ್ಲ, ಹೇ ಗೋಪಾಲ, ಈ ರೀತಿಯಾಗಿ ನಾನಾ ಹೆಸರುಗಳಿಂದ ಕರೆದು ಆರಾಧಿಸುವ ರೀತಿಯನ್ನು ಮೀರಾರಲ್ಲಿಯೂ ಕಾಣುತ್ತೇವೆ. 'ದೇವನೊಬ್ಬ ನಾಮ ಹಲವು' ಎಂಬುದು ನಿಜ, ಆದರೆ ಇಲ್ಲಿ 'ನಾಮ ಹಲವುಗಳ ದೇವನೊಬ್ಬ'ನನ್ನು ನಮಗೆಲ್ಲ ದರ್ಶಿಸಿರುವರು.

- **ಸಾಮಾಜಿಕ ಬಂಡಾಯ**

ಕನಕದಾಸರು, ಮೀರಾಬಾಯಿ ಕೇವಲ ತಮ್ಮ ತಮ್ಮ ಮಾರ್ಗಗಳನ್ನು ಅರಸಿ ಹೋಗಲಿಲ್ಲ. ಸಮಾಜವನ್ನು ಕಂಡವರು, ಜನರ ಒಡನಾಡಿಗಳು, ಸಮಾಜ ಡೊಂಕಾಗಿ ಕಂಡಾಗ ತಮ್ಮ ಹಾಡುಗಳ ಮೂಲಕ ಸಾಮಾಜಿಕ ಬಂಡಾಯವನ್ನು ಸಾರಿದರು.

ಸಮಾಜವನ್ನು ತಿದ್ದಿದರು. ಅವರ ಕೀರ್ತನೆ ಭಜನೆಗಳು ಸಾಮಾಜಿಕ ಪರಿವರ್ತನೆಗೆ ಬೆಳಕಾಗಿರುವುದನ್ನು ನಾವೆಲ್ಲರೂ ಮರೆಯುವ ಹಾಗಿಲ್ಲ.

ಕನಕದಾಸರು "ಜನರೊಳು ಮಾನಭಂಗ ಮಾಡಿದವರಿಗೆ
ಜೇನು ತುಪ್ಪ ಸಕ್ಕರೆ ಊಟ ಆಗಲಿ ಅವರಿಗೆ
ಹಾನಿ ಬರದಂತ ಲೋಕ ಬರಲಿ ಅವರಿಗೆ
ಮಹಾನುಭಾವ ಮುಕ್ತಿ ಕೊಡು ನೆಲೆಯಾದಿಕೇಶವನೆ ॥"

ಯಾವುದನ್ನು ಈಗ ನಾವು 'ಗಾಂಧಿಗಿರಿ' ಎನ್ನುತ್ತೇವೆಯೋ, ತಪ್ಪು ಮಾಡಿದವರಿಗೂ ಒಳ್ಳೆಯದಾಗಲೀ ಅನ್ನುತ್ತಾ ಅವರ ತಪ್ಪುಗಳನ್ನು ಎತ್ತಿ ತೋರಿಸಿದರು.

ಮೀರಾಬಾಯಿ "ಬಂದೇ ಬಂದಗೀ ಮತಿಭೂಲ ।
ಚಾರ ದಿನಾಕೀ ಕರಲೇ ಖೂಬೀ, ಜ್ಯೂಂ ಡಾಡಿಮದಾಪೂಲ ।
ಆಯಾ ಥಾ ಏ ಲೋಭ ಕೇ ಕಾರಣ,
ಮೂಲ ಗಮಾಯಾ ಭೂಲ ।"

"ದಾಳಿಂಬೆ ಹೂವಿನಂತೆ ನಾಲ್ಕು ದಿನ ಅರಳಿದ್ದು, ಒಡನೆ ಬಾಡಿ ಹೋಗುವ ನಶ್ವರ ಜೀವವಿದು. ಬರಿಯ ಭೋಗದಲ್ಲಿ ಮುಳುಗದಿರು. ಬಹಳ ಸಾಧಿಸುವ ಲೋಭದೊಂದಿಗೆ ಈ ಸಂಸಾರಕ್ಕೆ ಬಂದು ನೀನು ಇದ್ದುದನ್ನು ಕಳೆದುಕೊಂಡೆ" ಎಂದು ಎಚ್ಚರಿಸುವರು. ಮತ್ತೊಂದೆಡೆಗೆ ಹೀಗೆ ಹೇಳುತ್ತಾರೆ "ಆತ್ಮ ಪ್ರಸಂಶೆಯಲ್ಲೇ ಮಗ್ನನಾಗಿರುವ ನೀನು ನಿನ್ನನ್ನು ಹೊಗಳಿಕೊಳ್ಳುವುದರಲ್ಲೇ ಸಂತೋಷ ಪಡೆಯುತ್ತೀ. ನೀನು ಅಭಿಮಾನದ, ಅಹಂಕಾರದ ಎತ್ತರವಾದ ದಿನ್ನೆಯ ಮೇಲೆ ಕುಳಿತಿರುವೆ. ಅಲ್ಲಿ ನಮ್ರತೆಯ, ವಿನಯದ ನಿರ್ಮಲ ನೀರು ನಿಲ್ಲಲಾರದು. ನಿನ್ನ ಅಂತರಂಗದಲ್ಲಿ ರಾಮನಾಮದ ಭಾವನೆಯೇ ಇಲ್ಲ. ಆದರೆ ಸುಳ್ಳು ತೋರಿಕೆಗಾಗಿ ಜಪಮಾಲೆ ಹಿಡಿದಿರುವೆ. ಹೇ ಮನುಷ್ಯನೇ! ನೀನು ಹರಿಭಕ್ತರ ಜೊತೆಗೆ ಪ್ರೇಮವನ್ನು ಸ್ಥಾಪಿಸು". ಆತ್ಮದ ಅಹಂದಿಂದ ಹೊರಬಂದು ವಿನಯ, ನಿರ್ಮಲ ಭಾವವನ್ನು ಹೊಂದುವ ಅಗತ್ಯತೆಯ ಹಾಗೂ ಹರಿಭಕ್ತರಲ್ಲಿ ಪ್ರೀತಿ ವಿಶ್ವಾಸದ ಪ್ರೇಮವನ್ನು ಸ್ಥಾಪಿಸಲು ಕರೆಕೊಟ್ಟರು.

ಭಾರತೀಯರನ್ನು ಇಂದಿಗೂ ಕಾಡುವ ಸಮಸ್ಯೆ ಜಾತಿ, ಕುಲದ ಸಮಸ್ಯೆ. ಅದರಿಂದ ಹೊರ ಬರಲಾಗದೇ ಅದರ ವಿಷವರ್ತುಲದಲ್ಲಿಯೇ ಉಸಿರಾಡುತ್ತಿದ್ದೇವೆ. ಕುಲದ ಕುರಿತ ಕನಕದಾಸರ ವಿಚಾರ, ಅವರ ತಾತ್ವಿಕ ಮಾತುಗಳನ್ನು ನಾವಿಂದು ಅರಿತರೆ ನಮ್ಮ ಸಮಸ್ಯೆಗೆ ಪರಿಹಾರವಿದೆ. ಆದರೆ ಅಂದಿನ ಕಾಲದ ಜನರಂತೆ ಇಂದೂ ಕುಲದ ಕುರಿತು ವರ್ತಿಸುತ್ತಿರುವುದು ವಿಷಾದಧ ಸಂಗತಿಯಾಗಿದೆ.

"ಕುಲ ಕುಲವೆನ್ನುತಿಹರೋ
ಕುಲವಾವುದೂ ಸತ್ಯ ಸುಜನರಿಗೆ
..............................................
.............................................."

"ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ವೇಂದ್ರಿಯಗಳ ಕುಲ ಪೇಳಿರಯ್ಯಾ
ಆತ್ಮನು ಕಾಗಿನೆಲೆಯಾದಿಕೇಶವನೊಲಿದ
ಭಕ್ತರಿಗೆ ಕುಲವಾವುದು ಹೇಳಿರಯ್ಯಾ ॥"

ಕಾಗಿನೆಲೆಯಾದಿಕೇಶವ ಒಲಿದ ಭಕ್ತರಿಗೆ ಕುಲದ ಪ್ರಶ್ನೆಯೇ ಇಲ್ಲ ಎಂಬುದು ಕನಕರ ಸ್ವಷ್ಟ ಉಕ್ತಿಯಾಗಿದೆ.

"ಜಪವ ಮಾಡಿದರೇನು ತಪವ ಮಾಡಿದರೇನು
ವಿಪರೀತ ಕಪಟ ಗುಣ ಕಲುಷವಿದ್ದವರು"

ಕನಕದಾಸರು ಡಾಂಭಿಕ ಜಪತಪಗಳನ್ನು ನೇರವಾಗಿ ಖಂಡಿಸುತ್ತಾರೆ. ಕಪಟತನದಿಂದ ದೂರವಿರಬೇಕು ಎಂಬುದನ್ನು ಪ್ರತಿಪಾದಿಸಿ ಸಮಾಜದೊಳಗಿನ ಕಲುಷಿತ ಮನಸ್ಸುಗಳ ಕುರಿತು ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ.

ಇಡೀ ಸಮಾಜವೇ ಮೀರಾಬಾಯಿಯ ಕೃಷ್ಣಭಕ್ತಿಯನ್ನು ಶಂಕಿಸಿದಾಗ ನೊಂದ ಮೀರಾ ಸಮಾಜದ ಜನರನ್ನು ಬಿಟ್ಟು ದೈವದ ಮೊರೆ ಹೋಗುವಳು. ಸಮಾಜಕ್ಕೆ ಬೆನ್ನು ಮಾಡಿ ತನ್ನ ಭಕ್ತಿ ಮಾರ್ಗದ ಪ್ರಯಾಣವನ್ನು ಮುಂದುವರೆಸಿದಳು. ಮೀರಾ ಸ್ವತಃ ತನ್ನ ಅನುಭವವನ್ನು ಹೇಳಿಕೊಂಡಿದ್ದಾಳೆ.

"ಸಾಂವರೋ ಮ್ಹಾರೋ ಪ್ರೀತ ಣಿಭಾಜ್ಯೋಜೀ
ಥೇ ಛೋ ಮ್ಹಾರೋ ಗುಣರೋ ಸಾಗರ,
ಔಗುಣ ಮಾ ಬಿಸರಾಜ್ಯೋಜೀ ।
ಲೋಕಣಾ ಸೀಝ್ಯಾಂ ಮನ ನ ಪತೀಜ್ಯಾಂ,
ಮುಖಡಾ ಸಬದ ಸುಣಾಜ್ಯೋಜೀ ।
ದಾಸೀ ಥಾಂರೀ ಜಣಮ ಜಣಮ ಮ್ಹಾರೇ,
ಆಂಗಣ ಆಜ್ಯೋಜೀ ।
ಮೀರಾ ಕೆ ಪ್ರಭು ಗಿರಿಧರನಾಗರ,
ಬೇಡ ಪಾರ ಲಗಾಜ್ಯೋಜೀ ॥"

"ಹೇ ಕೃಷ್ಣ! ನಿನ್ನ ಪ್ರೀತಿಯ ಜವಾಬ್ದಾರಿಯನ್ನು ಪಾಲಿಸು, ನೀನೇ ನನ್ನ ಸುಗುಣಗಳ ಸಾಗರನೋ. ನನ್ನ ಅವಗುಣಗಳತ್ತ ಗಮನ ಹರಿಸಬೇಡ. ಜನ ನನಗೆ ಬಹಳ ಹೇಳಿದರು. ನನಗೆ ಯಾರ ಮಾತಿನಲ್ಲೂ ನಂಬಿಕೆ ಇಲ್ಲ. ಆದ್ದರಿಂದ ಸ್ವಯಂ ನೀನೇ ಬಂದು ನನಗೆ ಅನಾಹತ ನಾದವನ್ನು ಕೇಳಿಸು. ನಾನು ನಿನ್ನ ಜನ್ಮ ಜನ್ಮಾಂತರದ ದಾಸಿಯು. ನೀನು ನನ್ನ ಮನೆಗೆ ಬಾ. ಮೀರಾ ಹೇಳುತ್ತಾಳೆ – ಹೇ ಪರಮ ಪ್ರೇಮ ಸ್ವರೂಪನಾದ ಗಿರಿಧರ ನಾಗರನೇ, ನನ್ನನ್ನು ಉದ್ಧಾರ ಮಾಡು" ಎಂದು ಸಮಾಜದಲ್ಲಿನ ದುಷ್ಟ ಮುಖಗಳನ್ನು ಕಟ್ಟಿಕೊಡುತ್ತಾ ತನ್ನ ಅಚಲ ನಂಬಿಕೆಯನ್ನು ಹೊರ ಹಾಕಿರುವರು ಮೀರಾಬಾಯಿ.

- **ಪ್ರೇಮಭಕ್ತಿ**

ಭಕ್ತಿ ಮಾರ್ಗಗಳು ಅನೇಕ, ಆದರೆ ಸೇರುವ ಸ್ಥಳ ಮುಕ್ತಿಯೇ. ಭಕ್ತಿ ಕೇವಲ ದೇವರ ಆರಾಧನೆಯ ಒಂದು ಭಾಗವಾದರೆ, ಪ್ರೇಮಭಕ್ತಿ ಅದರ ಇನ್ನೊಂದು ರೀತಿ. ಮೇಲ್ನೋಟಕ್ಕೆ ಪ್ರೇಮಭಕ್ತಿ ಲೌಕಿಕದ ಭಾಷೆಯಾಗಿ ಕಂಡರೆ, ಒಳಾರ್ಥ ಆಧ್ಯಾತ್ಮಕ ಪರಾಕಾಷ್ಠತೆಯನ್ನು ನೀಡುವ ಜೊತೆಗೆ 'ಸತಿಪತಿಗಳೊಂದಾದ' ಭಕ್ತಿಯನ್ನು ನೆನಪಿಸುವುದು. ಯಾವಾಗಲೂ ಇಲ್ಲಿ ಭಕ್ತ ವಿರಹಿಯಾದರೆ ದೈವ ಪ್ರಿಯಕರನಾಗಿರುವನು. ಮೀರಾಬಾಯಿಯಲ್ಲಿ ನಾವು ಕಾಣುವುದು ಪ್ರೇಮಭಕ್ತಿಯನ್ನೇ. ಕನಕದಾಸರು ಈ ಮಾರ್ಗದಲ್ಲಿ ಚಲಿಸಿ ನಡೆದದ್ದು ಕಡಿಮೆಯಾದರೂ ಅವರಲ್ಲಿಯೂ ಪ್ರೇಮಭಕ್ತಿ ಭಾವದ ಕುರುಹುಗಳನ್ನು ಕಾಣುತ್ತೇವೆ.

ಮೀರಾಬಾಯಿ "ಪ್ರೇಮಭಗತಿಕೋ ಪೈಂಡೋ ಹಿ ನ್ಯಾರಾ
ಹಮಕ ಗೈಲ ಬತಾ ಜಾ ॥"

"ಪ್ರೇಮ ಭಕ್ತಿಯ ಸಾಧನೆಯ ಹಾದಿ ತೋರು. ನಾನು ವಿರಹದಲ್ಲಿ ಬಳಲುತ್ತಿರುವೆನು" ಎಂದು ದೇವನನ್ನು ಅಂಗಲಾಚುವಳು. ನಾನು ನಡೆಯುವುದು ಪ್ರೇಮಭಕ್ತಿ ಮಾರ್ಗದಲ್ಲಿ ಎಂಬುವುದನ್ನೂ ತಿಳಿಸುವಳು.

"ಮೀರಾ ಕೇ ಪ್ರಭು ಗಿರಿಧರನಾಗರ"

ಗಿರಿಧರ ನಾಗರನೇ ನನ್ನ ಮನೋ ವಲ್ಲಭ ಎಂದು ಹೆಮ್ಮೆಯಿಂದ ಮೀರಾ ಹೇಳುವಳು. "ನನ್ನದು ಪ್ರೇಮಭಕ್ತಿಯ ಮಾರ್ಗವಾಗಿದೆ. ನನಗೆ ಬೇರೆ ದಾರಿಯೇ ಗೊತ್ತಿಲ್ಲ, ರಾಣಾ ನನ್ನನ್ನು ಕೊಲ್ಲುವುದಕ್ಕಾಗಿಯೇ ನನಗೆ ವಿಷ ಕೊಟ್ಟಿದ್ದಾನೆ ಎಂಬುದು ನನಗೆ ಗೊತ್ತಿತ್ತು, ಆದರೂ ನಾನದನ್ನು ಕುಡಿದೆ. ಅದನ್ನು ಕುಡಿದ ನಂತರವು ನನ್ನ ಈ ಕೃಷ್ಣ ಪ್ರೇಮವು ಅಧಿಕವಾಯಿತೇ ಹೊರತು ಕಡಿಮೆಯಾಗಲಿಲ್ಲ" ಎಂದು ತನ್ನ ಪ್ರೇಮಭಕ್ತಿಯನ್ನು ತೆರೆದಿಟ್ಟಿರುವಳು.

ಕನಕದಾಸರು "ಸಜ್ಜನರ ಸಂಗದೊಳಗಿರಿಸೆನ್ನ ರಂಗ
ದುರ್ಜನರ ಸಂಗ ನಾನೊಲ್ಲೆ ಮಂಗಳಾಂಗ"

ಎನ್ನುವಲ್ಲಿ ಪ್ರೇಮಭಕ್ತಿ ಭಾವವನ್ನೇ ಕಾಣುತ್ತೇವೆ.

"ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ
ಕೂಗಿದರು ಧ್ವನಿ ಕೇಳಲಿಲ್ಲವೇ ನರಹರಿಯೇ"

ಎಂದು ದೇವನ ದರ್ಶನಕ್ಕಾಗಿ ಪ್ರೇಮದಿಂದ ಕೂಗುವರು. ಕೂಗಿದರೂ ಧ್ವನಿ ಕೇಳಲಿಲ್ಲವೇ ಹರಿಯೇ ಎಂದು ಪ್ರಶ್ನಿಸುವ ಪರಿ ಪ್ರೇಮಭಕ್ತಿಗೆ ಸಾಕ್ಷಿಯಾಗಿ ನಿಂತಿದೆ.

"ಪ್ರೇಮ ರೀ ಬಾತೀ ಜಲಾಯಾ ।
ಬಿರಹ ಸಮಂದಮೇ ಛೋಡ ಗಯಾ ಥೋ
ನೇಹ ರೀ ನಾವ ಚಲಾಯ ।"

"ನನ್ನ ಹೃದಯದಲ್ಲಿ ಪ್ರೇಮದ ಕಿಚ್ಚು ಹಚ್ಚಿ ನೀನೆಲ್ಲಿ ಮಾಯವಾದಿ? ಪ್ರೇಮದ ನೌಕೆಯಲ್ಲಿ ಕುಳ್ಳಿರಿಸಿ ನನ್ನನ್ನೇಕೆ ವಿರಹಸಮುದ್ರದಲ್ಲಿ ನೂಕಿದಿ?" ಎಂದು ಪ್ರಶ್ನಿಸುವ ಮೀರಾ

"ಮೀರಾ ಕೇ ಪ್ರಭು ಕಬ ರೇ ಮಿಲೋಗೆ
ಥೇ ಬಿನಾ ರಹ್ಯಾಣ ಜಾಯ ॥"

"ಪ್ರಭು ನೀನೆಂದು ನನಗೆ ದರ್ಶನ ಕೊಡುವೆ? ನೀನಿಲ್ಲದೆ ನಾನು ಒಂದು ಕ್ಷಣವೂ ಬದುಕಿರಲಾರೆ" ಎಂದು ತನ್ನ ಪ್ರೇಮವನ್ನು ತನ್ನ ಪ್ರಭುವಾದ ಶ್ರೀಕೃಷ್ಣನಲ್ಲಿ ನಿವೇದಿಸಿಕೊಂಡಿರುವಳು.

- **ಭಕ್ತಿಮಾರ್ಗ**

ನಮ್ಮ ಸಂತರು ಮತ್ತು ದಾರ್ಶನಿಕರು ಮುಕ್ತಿ ತಲುಪಲು ಭಕ್ತಿಮಾರ್ಗವನ್ನೇ ಆಯ್ದುಕೊಂಡರು. ಭಕ್ತಿಮಾರ್ಗದಲ್ಲಿ ಚಲಿಸಿದಾಗ ಆತ್ಮತೃಪ್ತಿ, ದೇವರ ದರ್ಶನ, ದೇವನ ಕೃಪೆ, ನಂತರ ಮೋಕ್ಷ ಮತ್ತು ಮುಕ್ತಿ ಎಂಬ ನಂಬಿಕೆಯಿಂದಲೇ ಬದುಕಿದವರು. ಕನಕದಾಸರು ಮತ್ತು ಮೀರಾಬಾಯಿ ಕೂಡಾ ತಮ್ಮ ಸಾಧನೆಗಾಗಿ ಭಕ್ತಿಮಾರ್ಗವನ್ನೇ ಆಯ್ದುಕೊಂಡರು.

ಕನಕದಾಸರು "ಕಾಲ ಕರ್ಮ ಶೀಲ ನೇಮ ನಿನ್ನದೇನೆಲೊ
ಜಾಲವಿದ್ಯೆ ಬಯಲ ಮಾಯೆ ನಿನ್ನದೇನೆಲೊ
ಕೀಲು ಜಡಿದ ಮರದ ಬೊಂಬೆ ನಿನ್ನದೇನೆಲೊ
ಲೋಲ ಆದಿಕೇಶವನ ಭಕ್ತನಾಗೆಲೊ ॥"

ತಮ್ಮ ಭಕ್ತಿಯ ಮಾರ್ಗವನ್ನೇ ಇತರರಿಗೂ ತೋರಿಸಿದ್ದಾರೆ.

"ಕಾಹೂ ಕೀ ಮ್ಯೆ ಬರಜೀ ನಾಹೀ ರಹೂಂ ।"

"ಯಾರು ನನ್ನನ್ನು ತಡೆದರೂ ಭಕ್ತಿಮಾರ್ಗದಿಂದ ವಿಚಲಿತಳಾಗಲಾರೆ" ಎನ್ನುವ ಮೀರಾಬಾಯಿ

"ಭಕ್ತಿಮಾರ್ಗ ಮೇ ಹಾಂಸೀ ॥"

"ನನ್ನ ಸ್ವಾಮಿಯಾದ ಗಿರಿಧರ ನಾಗರನು ನನ್ನನ್ನು ಭಕ್ತಿಪಾಶದಲ್ಲಿ ಕಟ್ಟಿ ಹಾಕಿದ್ದಾನೆ" ಎಂದು ತನ್ನ ಭಕ್ತಿಮಾರ್ಗದ ಗಟ್ಟಿತನವನ್ನು ಪ್ರದರ್ಶಿಸುವಳು.

"ಪಾಡುವೆನು ನಿನ್ನ ನಾಮ ಸೀತಾರಾಮ
ಆಡುವೆನು ಮನದಣಿವ ತನಕ
ಬೇಡಿಕೊಂಬೆನೋ ನಿನ್ನ ಭಕ್ತರ ಸೇವೆಯನು
ಬಾಡದಾದಿಕೇಶವ ಭಕ್ತವತ್ಸಲನೇ ॥"

ಬಾಡದಾದಿಕೇಶವನ ಭಕ್ತವತ್ಸಲರಾದ ಕನಕದಾಸರು ಭಕ್ತಿಮಾರ್ಗದ ಜೊತೆಗೆ ಭಕ್ತರ ಸೇವೆಗೂ ಸದಾ ತವಕಿಸಿದವರು.

ಮೀರಾಬಾಯಿ "ಮ್ಹಾರೇ ಘರ ರಮತೋ ಹೀ ಜೋಗಿಯಾ
ತೂ ಆಂವ
ಕಾನಾ ಬಿಚ ಕುಂಡಲ ಗಲೇ ಬಿಚ ಸೇಲೀ,
ಅಂಗ ಭಬೂತ ರಮಾಯ ।
ತುಮ ದೇಖ್ಯಾಂ ಬಿನ ಕಲ ನ ಪಡತ ಹೈ
ಗ್ರಿಹ ಅಂಗಣೋ ನ ಸಹಾಯ ।"

"ಒಡೆಯ ನನ್ನ ಮನೆಗೆಂತಲೇ, ನನಗೆಂತಲೇ ಬರದಿದ್ದರೂ ಸರಿ, ಸುಮ್ಮನೇ ಈಕಡೆಗೆ ಅಡ್ಡಾಡುವ ನೆಪದಿಂದಾದರೂ ನನ್ನ ಮನೆಗೆ ಬಾ. ನಿನಗಾಗಿಯೇ ನಾನು ವೈರಾಗ್ಯ ಧಾರಣ ಮಾಡಿದ್ದೇನೆ. ಕಿವಿಯಲ್ಲಿ ಕುಂಡಲ, ಕೊರಳಲ್ಲಿ ಮಣಿ ಹಾಗೂ ಶರೀರದ ಮೇಲೆ ವಿಭೂತಿಯನ್ನು ಧಾರಣ ಮಾಡಿದ್ದೇನೆ. ನಿನ್ನನ್ನು ಕಾಣದಿದ್ದರೆ ನನಗೆ ಶಾಂತಿ–ಸಂತೃಪ್ತಿಗಳೇ ಇಲ್ಲ. ಮನೆಯಂಗಳವು, ಶೂನ್ಯವೆನಿಸುತ್ತದೆ". ಮೀರಾಬಾಯಿ ಭಕ್ತಿಮಾರ್ಗದಿಂದಲೇ ಮನೆಮನಗಳು ಬೆಳಗಬೇಕು ಎಂಬ ಭಾವದವಳು. ಅವಳ ಭಕ್ತಿಮಾರ್ಗಕ್ಕೆ ಈ ಪದವೂ ಕೈಗನ್ನಡಿಯಾಗಿದೆ.

ಒಟ್ಟಾರೆಯಾಗಿ ಕನಕದಾಸರ ಕೀರ್ತನೆಗಳು, ಮೀರಾಬಾಯಿಯ ಪದಾವಲೀಗಳು ಭಕ್ತಿ ಪಂಥದ, ಹರಿದಾಸ ಪರಂಪರೆಯ ಕೊಡುಗೆಗಳಾಗಿವೆ. ತಮ್ಮ ಅನುಭವ–ಅನುಭಾವ ಭಕ್ತಿಯ ಅನುಸಂಧಾನಕ್ಕಾಗಿ ಸಾಹಿತ್ಯ ಜೊತೆಗೆ ಸಂಗೀತ ಸಾಮರಸ್ಯವನ್ನು ತಂದವರು. ಸಂತ ಕವಿಗಳಾಗಿ ಭಕ್ತಿಭಾವದಿಂದ ಆಧ್ಯಾತ್ಮಿಕ ಸಮೃದ್ಧತೆಯ ಜೊತೆಗೆ ಕಾವ್ಯಗುಣವನ್ನು ತಮ್ಮ ಕೀರ್ತನೆ, ಭಜನೆಗಳಲ್ಲಿ ಕಟ್ಟಿಕೊಟ್ಟರು. ಇಂತಹ ಅನುಭಾವಿಗಳ ಕೀರ್ತನೆ, ಭಜನೆಗಳನ್ನು ಹಾಡುವದು ಮಾತ್ರವಲ್ಲಿ ಇಂದಿನ ಪ್ರಸ್ತುತ ಆಧುನಿಕ ಮನಸ್ಸಿಗೆ ಅವರನ್ನು ಕರೆತರಬೇಕಾದ ಜರೂರತೆ ಇದೆ. ಕನಕದಾಸರ ಕೀರ್ತನೆಗಳನ್ನು, ಮೀರಾಬಾಯಿಯ ಭಜನೆಗಳನ್ನು ರಸತತ್ವ (ಭಕ್ತಿ, ಆಧ್ಯಾತ್ಮ), ರೂಪತತ್ವ (ಕಾವ್ಯಗುಣ), ಸಂಗೀತ ಮಹತ್ವತೆಯ ಹಿನ್ನಲೆಯಿಂದ ಮತ್ತೆ ಅಧ್ಯಯನಕ್ಕೆ ಒಳಪಡಿಸಬೇಕಾದ ಅಗತ್ಯತೆ ಇದೆ. ಅಂತಹ ಚಿಕ್ಕ ಪ್ರಯತ್ನವಿದು.

## ಸಹಾಯಕ ಗ್ರಂಥಗಳು


- ಕೆ.ಆರ್.ಕೆ. ಮೂರ್ತಿ (ಸಂ) — ಹರಿಭಕ್ತ ಕನಕದಾಸರ ಪದಗಳು, ಜನಪದ ಪ್ರಕಾಶನ, ಬೆಂಗಳೂರು.
- ಡಾ. ಶಿವಪ್ರಸಾದ ವೈ.ಎಸ್. (2011) — ಕನಕಪುರಂದರ ಇಹ–ಪರ ಮುಖಾಮುಖಿ, ಐಬಿಎಚ್ ಪ್ರಕಾಶನ, ಬೆಂಗಳೂರು
- ಡಾ. ನಾ. ಸೋಮೇಶ್ವರ (ಸಂ) (2015) — ಅರಿವಿನ ಹರಿಕಾರ ಕನಕದಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
- ಡಾ. ನಿಂಗಣ್ಣ ಸಣ್ಣಕ್ಕಿ (1994) — ವಿಶ್ವಮಾನ್ಯ ಶ್ರೀ ಕನಕದಾಸರು, ವಿದ್ಯಾನಿಧಿ ಪ್ರಕಾಶನ, ಗದಗ.
- ಎಂ. ದೇವಾರ್ಜುನ (2009) — ಕನಕ ಪವಾಡ, ನವಜ್ಯೋತಿ ಪ್ರಕಾಶನ, ಹೊಸಕೋಟೆ.
- ಶೇಷ ನವರತ್ನ (2001) — ಮೀರಾಬಾಯಿ ಕೀರ್ತನೆಗಳು, ಸಮಾಜ ಪುಸ್ತಕಾಲಯ, ಧಾರವಾಡ.
- ವ್ಹಿ.ಸಿ. ಐರಸಂಗ (1991) — ಮೀರಾ ಭಜನೆಗಳು, ಮೀರಾಬಾಯಿ ಕಥೆ, ಮಾರುತಿ ಪ್ರಕಾಶನ, ಧಾರವಾಡ.







